

ನಾದ ರೂಪ

ಮೂಲ: ಶ್ರೀ ಬ್ರಹ್ಮರ್ಷಿ ಶ್ರೀ ದೈವರಾತ್
ಕನ್ನಡಕ್ಕೆ : ಕೇಶವ್ ಆರ್. ಕೋಡಿಯಾಲ್
ಪರಿಷ್ಕರಣೆ : ಶ್ರೀ ಡಿ. ಗಣಪತಿಶಾಸ್ತ್ರೀ

ನಾದ ರೂಪ

ಹಿಂದಿ ಮೂಲ : ಬ್ರಹ್ಮರ್ಷಿ ದೈವರಾತ

ಕನ್ನಡಕ್ಕೆ : ಕೇಶವರಾವ್ ಆರ್. ಕೋಡಿಯಾಲ್

ಪರಿಷ್ಕರಣೆ

ವೇ। ಬ್ರ। ಡಿ. ಗಣಪತಿ ಶಾಸ್ತ್ರಿಗಳು

ಪ್ರಕಾಶಕರು

ಪುಸ್ತಕಶಕ್ತಿ ಪ್ರಕಾಶನ

ನಂ. 103, 3ನೇ ಮುಖ್ಯ ರಸ್ತೆ, 2ನೇ ಷಾಪ್ ಲೈನ್

ಟಾಟಾ ಸಿಲ್ಕ್ ಫಾರಂ, ಬಸವನಗುಡಿ, ಬೆಂಗಳೂರು - 560 004

e-mail : pustakshakti@yahoo.com

website: www.pustakshakti.com

Phone: (off):+9180-26915917, Mobile :+91 9448733323, 9972129376

Telefax : 080-23220880

ನಾದ ರೂಪ: ಹಿಂದಿ ಮೂಲ : ಬ್ರಹ್ಮರ್ಷಿ ದೈವರಾತ್, ಕನ್ನಡಕ್ಕೆ : ಕೇಶವರಾವ್ ಆರ್. ಕೊಡಿಯಾಲ್, ಪರಿಷ್ಕರಣೆ : ವೇ। ಬ್ರ। ಡಿ. ಗಣಪತಿ ಶಾಸ್ತ್ರಿಗಳು

ಪ್ರಕಾಶಕರು: ಪುಸ್ತಕ ಶಕ್ತಿ ಪ್ರಕಾಶನ, ನಂ. 103, 3ನೇ ಮುಖ್ಯ ರಸ್ತೆ, 2ನೇ ಷಾಪ್ ಲೈನ್, ಟಾಟಾ ಸಿಲ್ಕ್ ಫಾರಂ, ಬಸವನಗುಡಿ, ಬೆಂಗಳೂರು-04. ಫೋನ್: **9180–26915917, ಮೊಬೈಲ್: + 91 9448733323, 9972129376**

ಪುಟಗಳು : xiv+ 82 = 96

ಪ್ರಥಮಮುದ್ರಣ : 2009

ಪ್ರತಿಗಳು : 1000

ಕ್ಯಾಲಿಕೋ ಪ್ರತಿ : **ರೂ. 150/-**

ಪುಸ್ತಕ ಅಳತೆ : 1/8 ಡೆಮ್ಮಿ

ಕಾಗದದ ಬಳಕೆ : 90 ಜಿ.ಎಸ್.ಎಂ. ಮ್ಯಾಪ್ಲಿಥೋ

ಮುಖಪುಟ ವಿನ್ಯಾಸ :
ಶ್ರೀ ವೈ.ಕೆ. ಮೋಹನ್

ಅಕ್ಷರಜೋಡಣೆ :
ಸಹನಾ ಗ್ರಾಫಿಕ್ಸ್ : ಮೊ : 9342196255

ISBN : 978-93-80137-09-4

ಪ್ರತಿಗಳ ಮಾರಾಟದ ಹಕ್ಕು :

ಪುಸ್ತಕ ಶಕ್ತಿ ಪ್ರಕಾಶನ
ನಂ. 103, 3ನೇ ಮುಖ್ಯ ರಸ್ತೆ, 2ನೇ ಷಾಪ್ ಲೈನ್
ಟಾಟಾ ಸಿಲ್ಕ್ ಫಾರಂ
ಬಸವನಗುಡಿ, ಬೆಂಗಳೂರು - 560 004

ಮುದ್ರಣ : ಇಂಚರ Inchara PRINTERS

ನಂ. 200, ಗಣಪತಿನಗರ
ಹೊಸಕೆರೆಹಳ್ಳಿ ಮುಖ್ಯ ರಸ್ತೆ, ಬೆಂಗಳೂರು-26
ಮೊ : 9880039575

ಪ್ರಕಾಶಕರ ಮಾತು

ಬ್ರಹ್ಮರ್ಷಿ ದೈವರಾತರವರ ದಿವ್ಯಜ್ಞಾನದಿಂದ ಹೊರಬಂದ ಹಿಂದಿಮೂಲದ ನಾದರೂಪ ಕೃತಿಯನ್ನು ಕನ್ನಡಕ್ಕೆ ಭಾಷಾಂತರಿಸಿ, ಹೊರತರಲು ನಾನು ಮತ್ತು ಗೋಕರ್ಣದ ಶ್ರೀ ದೇವಶ್ರವ ಶರ್ಮರವರು ನಿಶ್ಚಯಿಸಿದಾಗ ಹಾಗೂ ಈ ಅನುವಾದವನ್ನು ಯಾರಿಂದ ಆಗಬೇಕೆಂದು ಯೋಚಿಸುತ್ತಿದ್ದಾಗ ನಮಗೆ ಹೊಳೆದ ಮೊದಲ ಮಹಾನುಭಾವರು ಮುಂಬೈ ಡೊಂಬಿವೆಲಿಯಲ್ಲಿ ನೆಲೆಸಿರುವ ಶ್ರೀಯುತ ಕೇಶವರಾವ್.ಆರ್. ಕೊಡಿಯಾಲ್‌ರವರು. ಅವರಿಗೆ ನಾನು ದೈವರಾತ್‌ರ ಹಿಂದಿ ಪ್ರತಿಗಳನ್ನು ಕಳುಹಿಸಿ, ಈ ನಮ್ಮ ಇಚ್ಛೆಯನ್ನು ವ್ಯಕ್ತಪಡಿಸಿದೆ. ನಮ್ಮ ಉದ್ದೇಶವನ್ನು ಮನಗೊಂಡ ಶ್ರೀಯುತರು ತಮಗೆ ತಲುಪಿದ ಪ್ರತಿಗಳನ್ನು ಅವಲೋಕಿಸಿ, ಸಾಹಿತ್ಯವನ್ನು ಬಹಳ ಮೆಚ್ಚಿ, ಒಪ್ಪಿಗೆ ಕೊಟ್ಟರು. ತಡ ಮಾಡದೇ ಅನುವಾದದ ಕಾರ್ಯಕ್ಕೆ ಇಳಿದು, ಕೆಲವೇ ವಾರಗಳಲ್ಲಿ ಕನ್ನಡದ ಅನುವಾದದ ಪ್ರತಿಗಳನ್ನು ಪ್ರಕಟಣೆಗೆ ಕೊಟ್ಟು ಸಹಕರಿಸಿ ಉಪಕಾರ ಮಾಡಿದರು. ಈ ಕಾರ್ಯವನ್ನು ಅವರಿಂದ ಮಾಡಿಸಿದ ಆ ದೈವಕ್ಕೆ ನನ್ನ ಮೊದಲ ವಂದನೆಗಳು.

ಶ್ರೀಯುತ ಕೇಶವರಾವ್ ಆರ್. ಕೊಡಿಯಾಲ್‌ರವರು ಮೂಲತಃ ಧಾರವಾಡ ಜಿಲ್ಲೆಯ ಹಾನಗಲ್‌ನವರು. ಅವರ ವಿದ್ಯಾಭ್ಯಾಸ ಹಾಗು ವೃತ್ತಿ ಜೀವನ ಮುಂಬೈನಲ್ಲಿ ನಡೆಯಿತು. ಅವರಿಗೆ ಮೊದಲಿಂದಲೂ ತತ್ವಜ್ಞಾನ ಮತ್ತು ಆಧ್ಯಾತ್ಮಿಕ ವಿಷಯಗಳಲ್ಲಿ ಒಲವು. ವಿದ್ಯಾರ್ಥಿ ಜೀವನದಿಂದಲೇ ಕವಿತೆಗಳನ್ನು ಓದುವುದು, ಬರೆಯುವುದು ಮತ್ತು ಇತರರು ಬರೆದ ಕವಿತೆಗಳ ಬಗ್ಗೆ ಚರ್ಚೆ ನಡೆಸುವುದು, ಇದು ಅವರ ಹವ್ಯಾಸ. ಮುಂಬೈ ಮಹಾರಾಷ್ಟ್ರದಲ್ಲಿ ಇದ್ದರೂ ಅವರಿಗೆ ಕನ್ನಡ ಭಾಷೆ ಹಾಗೂ ಸಾಹಿತ್ಯದ ಬಗ್ಗೆ ವಿಶೇಷ ಒಲವು. ಕನ್ನಡ, ಮರಾಠಿ, ಸಂಸ್ಕೃತ, ಹಿಂದಿ, ಇಂಗ್ಲೀಷ್ ಫ್ರೆಂಚ್ (French)ಮೊದಲಾದ ಭಾಷೆಗಳಲ್ಲಿ ಪಾಂಡಿತ್ಯವನ್ನು ಬೆಳೆಸಿಕೊಂಡವರು.

ಶ್ರೀಯುತರು ಮರಾಠಿಯಿಂದ ಕನ್ನಡಕ್ಕೆ

1) ಜ್ಞಾನೇಶ್ವರೀ 2) ಭಗವದ್ಗೀತಾ 3) ಹರಿಪಾಠ 4) ಪರಬ್ರಹ್ಮಾಚಿ – ದೀಪಶಿಖಾ

ಸಂಸ್ಕೃತದಿಂದ

ಮುಕುಂದಮಾಲಾ :-

ಕನ್ನಡ ಮತ್ತು ಇಂಗ್ಲೀಷಿನಲ್ಲಿ

1) ಆತ್ಮ ಚರಿತ್ರೆಗಳು 2) ನಿಬಂಧಗಳು 3) ಪ್ರವಾಸ ಕಥೆಗಳು 4) ಕವಿತೆಗಳನ್ನು ಓದುಗರಿಗೆ ಆನಂದ ತರುವಂತೆ ಅನುವಾದಿಸಿದ್ದಾರೆ.

ಕನ್ನಡದಿಂದ ಇಂಗ್ಲೀಷ್ ಭಾಷೆಗೆ ಅನುವಾದಿಸಿರುವ ಡಾ॥ ಡಿ.ವಿ. ಗುಂಡಪ್ಪನವರ ಮೇರು ಕೃತಿಯಾದ ಮಂಕುತಿಮ್ಮನ ಕಗ್ಗ ಪುಸ್ತಕ ಶಕ್ತಿ ಪ್ರಕಾಶನದಿಂದ ಹೊರಬರಲಿದೆ. ಮಿತ ಭಾಷಿಗಳು, ವಿನೋದಪ್ರಿಯರು, ಮೃದು ಸ್ವಭಾವದವರು ಹಾಗೂ ಯಾವ

ಪ್ರಶಂಸೆಗಳಿಗಾಗಲಿ, ಪ್ರಚಾರಗಳನ್ನು ಯಾಚಿಸದ ಶ್ರೀಯುತರು ತಮ್ಮ ನಿವೃತ್ತಿ ಜೀವನವನ್ನು ಸಾಹಿತ್ಯ ಕೃಷಿಯಲ್ಲಿ ತಮಗೆ ತಾವೇ ಅರ್ಪಿಸಿಕೊಂಡು, ಕಿರಿಯರಿಗೆ ಮಾರ್ಗದರ್ಶಕ-ರಾಗಿದ್ದಾರೆ. ಇವರ ಈ ಸೇವೆಯನ್ನು ಪುಸ್ತಕ ಶಕ್ತಿ ಪ್ರಕಾಶನ ಸದಾ ಸ್ಮರಿಸುತ್ತದೆ.

ನನಗೆ ಪ್ರಿಯ ಹಿರಿಯರಾದ ಶ್ರೀ ಡಿ. ಗಣಪತಿ ಶಾಸ್ತ್ರಿಗಳ ಸಲಹೆ, ಮಾರ್ಗದರ್ಶನ, ಹಾಗು ಸಹಕಾರ ದೊರಕಿ, ಅವರ ಪರಿಷ್ಕರಣೆಯೊಂದಿಗೆ ಈಗ ಪುಸ್ತಕ ರೂಪದಲ್ಲಿ ತಮ್ಮ ಕೈಸೇರುತ್ತಿದೆ. ಅವರಿಗೂ ಹಾಗು ಅವರ ಕುಟುಂಬಕ್ಕೆ ನಾನು ಆಭಾರಿಯಾಗಿದ್ದೇನೆ.

ನಾದರೂಪ ಈ ಕೃತಿಯನ್ನು ಪುಸ್ತಕ ರೂಪದಲ್ಲಿ ಹೊರತರುವ ಬೇಡಿಕೆಯನ್ನು ತಂದ ಗೋಕರ್ಣ ನಿವಾಸಿ ಬ್ರಹ್ಮರ್ಷಿ ದೈವರಾತರ ಪುತ್ರರಾದ ಶ್ರೀ ದೇವಶ್ರವ ಶರ್ಮರವರು ನಮ್ಮ ಕಛೇರಿಗೆ ಬಂದಾಗ ಅವರಿಗೆ ನಿರಾಸೆ ಕಾದಿತ್ತು, ಕಾರಣ ಪ್ರಗತಿಯಲ್ಲಿ ಮತ್ತು ಅಚ್ಚಿನಲ್ಲಿ ಇದ್ದ ಪುಸ್ತಕಗಳನ್ನು ಅವರಿಗೆ ಪರಿಚಯಿಸಿದಾಗ. ಸಮಯ ಕೊಡುವಂತೆ ವಿನಂತಿಸಿಕೊಂಡೆ. ಆದರೆ ಅವರು ನನ್ನ ಒತ್ತಾಯಕ್ಕೆ ಮಣಿಯಲಿಲ್ಲ. ನನಗೆ ಈ ಕೃತಿ ಬಹಳ ಮುಖ್ಯ ಆಗಲೇಬೇಕೆಂದು ಕೇಳಿಕೊಂಡರು ಅವರ ಈ ವಿಶ್ವಾಸದ ಒತ್ತಾಯಕ್ಕೆ ಮಣಿದು, ಈ ಕೃತಿಯನ್ನು ಓದುಗರಿಗೆ ನೀಡುತ್ತಿದ್ದೇನೆ. ಅವರ ಅಭಿಮಾನ ಮತ್ತು ನನ್ನ ಮೇಲಿರುವ ಪ್ರೀತಿ ವಿಶ್ವಾಸಕ್ಕೆ ಕೃತಜ್ಞತೆಗಳು.

ಗೋಕರ್ಣ ನಿವಾಸಿಗಳಾದ ವಿದ್ವಾನ್ ಸಾಂಬಾದೀಕ್ಷಿತ್‌ರವರು ಅತಿ ಪ್ರೀತಿ ವಿಶ್ವಾಸದಿಂದ ಈ ಕೃತಿಗೆ ಮುನ್ನುಡಿಯಿಂದ ಆಶೀರ್ವದಿಸಿ ಕೃತಿಯ ಮೌಲ್ಯವನ್ನು ಹೆಚ್ಚಿಸಿದ್ದಾರೆ. ಅವರಿಗೆ ನನ್ನ ಪ್ರೀತಿಯ ಭಕ್ತಿಯ ಕೃತಜ್ಞತೆಗಳು.

ನಾದ ರೂಪದ ಪೂರ್ಣಫಲವೂ ಅತಿ ಶೀಘ್ರವಾಗಿ ಓದುಗರಿಗೆ ದೊರೆಯಲು ಸಹಕರಿಸಿದ ಪುಸ್ತಕಶಕ್ತಿಯ ಪರಿಣಿತ ಪರಿವಾರಕ್ಕೆ ನನ್ನ ವಂದನೆಗಳು.

ಈ ಕೃತಿ ನಮ್ಮ ಪ್ರಕಾಶನದಿಂದ ಹೊರತರುವುದಕ್ಕೆ ಆಶೀರ್ವದಿಸಿ ಪ್ರೇರೇಪಿಸಿದ ದಿ॥ ಬ್ರಹ್ಮರ್ಷಿ ದೈವರಾತರವರ ಆತ್ಮಕ್ಕೆ ನನ್ನ ಸಾಷ್ಟಾಂಗ ಪ್ರಣಾಮಗಳು.

ವೈ.ಕೆ. ಮೋಹನ್
ಪುಸ್ತಕಶಕ್ತಿ ಪ್ರಕಾಶನ

ಮುನ್ನುಡಿ

ಬ್ರಹ್ಮಶ್ರೀ ದೈವರಾತರ 'ನಾದರೂಪ' ಗ್ರಂಥವನ್ನು ಅದರ ಕನ್ನಡ ಅನುವಾದವನ್ನು ಶ್ರೀಯುತ ಕೇಶವ ಆರ್. ಕೊಡಿಯಾಲ್‌ರವರು ಅತ್ಯಂತ ಭಕ್ತಿ, ಶ್ರದ್ಧೆಯಿಂದ ಮಾಡಿದ್ದಾರೆ ಹಾಗೂ ವೇ|| ಬ್ರ|| ಶ್ರೀ ಡಿ. ಗಣಪತಿ ಶಾಸ್ತ್ರಿಗಳವರಿಂದ ಮೂಲ ಕೃತಿಗೆ ಎಲ್ಲೂ ಧಕ್ಕೆಯಾಗದಂತೆ ಎಚ್ಚರಿಕೆಯ ಪರಿಷ್ಕರಣೆ ಮಾಡಿರುವುದನ್ನು ನೋಡಿ ಧನ್ಯನಾದೆ. ಇದಕ್ಕೆ ಮುನ್ನುಡಿಯನ್ನು ಬರೆಯಬೇಕೆಂದು 'ಪುಸ್ತಕಶಕ್ತಿ' ಪ್ರಕಾಶನದ ಮುಖ್ಯಸ್ಥರಾದ ಶ್ರೀ ವೈ.ಕೆ. ಮೋಹನ್ ಇವರು ಕೇಳಿಕೊಂಡರು ಮುನ್ನುಡಿಯನ್ನು ಅತೀ ಸಂತೋಷದಿಂದ ಬರೆಯುತ್ತಿದ್ದೇನೆ.

ಶ್ರೀ ದೈವರಾತರು ಬ್ರಹ್ಮಶ್ರೀಗಳಾಗಿದ್ದು ಅವರಿಂದಲೇ ರಚಿತವಾದ 'ನಾದರೂಪ' ಗ್ರಂಥವನ್ನು ಅವರೇ ತಮ್ಮ ಅಮೃತ ಹಸ್ತದಿಂದ ನನಗೆ ಆದರ ಪೂರ್ವಕವಾಗಿ ಕೊಟ್ಟಿದ್ದರು. **"ಕಾರಾಣಾತ್ಕಾರ್ಯ ಮುನ್ನೇಯಂ"** ಎಂಬಂತೆ ಅದು ಯಾಕಾಗಿತ್ತೆಂಬುದು ಈಗ ಗೊತ್ತಾಗಿದೆ. ಸ್ವತಃ ನಾದದಿಂದಲೇ ಮಂತ್ರ ದರ್ಶನ ಮಾಡಿದ ಬ್ರಹ್ಮಶ್ರೀ ದೈವರಾತರು ಈ ಗ್ರಂಥವನ್ನು ದರ್ಶನದಂತೆಯೇ ರಚಿಸಿ ನಮ್ಮೆಲ್ಲರಿಗೆ ಉಪಕಾರ ಮಾಡಿದ್ದಾರೆ. ಈಗ ಕನ್ನಡಿಗರಾದ ನಮಗೆಲ್ಲ ಅರಿಯಲು ಯೋಗ್ಯವಾಗುವಂತೆ ಪುಸ್ತಶಕ್ತಿ ಪ್ರಕಾಶನ ಪ್ರಕಟಿಸಿ ಉಪಕರಸಿದೆ. ಮೂಲದ ಪೂರ್ಣ ಭಾವವು ಕನ್ನಡದಲ್ಲಿ ಅನುವಾದವಾದದ್ದನ್ನು ಸಂಪೂರ್ಣವಾಗಿ ಓದಿ ಹರ್ಷಗೊಂಡಿದ್ದೇನೆ. ಈ ಪುಸ್ತಕವನ್ನು 'ಪುಸ್ತಕಶಕ್ತಿ' ಯ ಮುಖ್ಯಸ್ಥರಾದ ಶ್ರೀ ವೈ.ಕೆ. ಮೋಹನ್‌ರವರು ಅಚ್ಚು ಕಟ್ಟಾಗಿ ಮುದ್ರಿಸಿ ಹಿಂದಿಯಲ್ಲಿರುವ ಮೂಲಗ್ರಂಥವನ್ನು (ಸಂಗೀತ ವಿದ್ಯಾ) ಓದುಗರಿಗೆ ರಚಿಸಿ ಹರ್ಷವನ್ನುಂಟುಮಾಡಿದ್ದಾರೆ. ಇದರಿಂದ ದೈವರಾತರ (ನಮ್ಮ ಗುರುಗಳಾದ) ಬಗ್ಗೆ ಅವರಿಗಿರುವ ಭಕ್ತಿ ನಿಷ್ಠೆ ನೋಡುವಂತಾಗಿದೆ. ದೈವರಾತರ ಅಪರೂಪದ ಛಾಯಾಚಿತ್ರಗಳನ್ನು ಸಂಗ್ರಹಿಸಿ ಈ ಕೃತಿಯು ಚಿತ್ರ ಸಂಪುಟದಲ್ಲಿ ಅಳವಡಿಸಿರುವುದು ಕೃತಿಯ ಮೌಲ್ಯವನ್ನು ಹೆಚ್ಚಿಸಿದೆ. ಈ ಪುಸ್ತಕವನ್ನು ಕನ್ನಡಿಗರು ಓದಿ ಮಹರ್ಶಿ ದೈವರಾತರ ಕೃಪೆಗೆ ಪಾತ್ರರಾಗಬೇಕಾಗಿ ಅರಿಕೆ.

ತಮ್ಮ

विद्वान सांबा दीक्षित

(ವಿದ್ವಾನ್ ಸಾಂಬಾ ದೀಕ್ಷಿತ)

'ದೀಕ್ಷಿತಗುಹ'

ನಾಗಬೀದಿ, ಗೋಕರ್ಣ

ಬನಾರಸ್ ಹಿಂದೂ ವಿಶ್ವವಿದ್ಯಾಲಯದಿಂದ
ಪ್ರಕಟವಾದ ವಾರ್ಷಿಕ ಪತ್ರಿಕೆ "ನಾದರೂಪ" ದಿಂದ

ಸಂಗೀತ ಪ್ರಶಂಸೆ

ಬ್ರಹ್ಮರ್ಷಿ ದೈವರಾತ ಪ್ರಣೀತ ಶ್ಲೋಕಗಳು

ಸಂಗೀತಂ ಸಾಮವೇದೇ ಸ್ವರ-ರಸ-ಸಮತಾ-ಯೋಗತೋ-ಗಾಯನಾರ್ಹೇ
ಗಾಂಧರ್ವಾಖ್ಯೋಪವೇದೇ ಜನಜಗದಧಿಪಪ್ರತ್ಯಗಾತ್ಮ ಪ್ರಸಾದೇ ।
ಸಿದ್ಧಾಃ ಸಪ್ತಸ್ವರಾಸ್ತೇ ತ್ರಿಷವಣ ಗುಣತೋ ಮಂದ್ರಮಧ್ಯೋಚ್ಚತಾರಾ
ಬದ್ಧಾಃ ಸೋಪಾನರೂಪಾಃ ಪ್ರತಿಪದಮುದಿತಾಃಸ್ಥೂಲಸೂಕ್ಷ್ಮಾತಿಸೂಕ್ಷ್ಮಾಃ ॥ 1 ॥

ಸ್ವರ ಮತ್ತು ರಸಗಳ ಸಾಮ್ಯಯೋಗದಿಂದ ಹಾಡಲಾಗುವ ಸಾಮವೇದದಲ್ಲಿ, ರಾಜಾ ಮತ್ತು ಪ್ರಜಾ ಜನರ ಅಂತರಾತ್ಮವನ್ನು ಸಮನಾಗಿ ಪ್ರಸನ್ನ ಮಾಡುವ ಸಂಗೀತವು ಗಂಧರ್ವ ಉಪವೇದದಲ್ಲಿದೆ. ಆ ಸಂಗೀತದಲ್ಲಿ ಏಳು ಸಿದ್ಧ ಸ್ವರಗಳು, ಪ್ರಾತಃ, ಮಧ್ಯಾಹ್ನ ಮತ್ತು ಸಾಯಂಕಾಲದ ಸವನದೊಂದಿಗೆ, ಸ್ಥೂಲ, ಸೂಕ್ಷ್ಮ ಮತ್ತು ಅತಿಸೂಕ್ಷ್ಮವಾಗಿದ್ದರಿಂದ, ಕ್ರಮಶಃ ಮಂದ್ರ, ಮಧ್ಯ ಮತ್ತು ತಾರ ರೂಪದಿಂದ ವಿಭಾಗಿಸಲ್ಪಟ್ಟಿದ್ದು ಎಲ್ಲೆಲ್ಲಿಯೂ ಮೆಟ್ಟಲಿನಂತೆ ಕಟ್ಟಲಾಗಿವೆ ಎಂದೆನ್ನುತ್ತಾರೆ.

ವಾಣ್ಯಾ ಪ್ರಾಣೇನ ನಾದೇ ಪ್ರಣಿಹಿತಮನಸಾ ಗಾಯನೇ ತತ್ತ್ವರಾಣಾಂ ।
ವೀಣಾ ತಂತ್ರೀ ಮೃದಂಗ ಶ್ರುತಿ-ನಿನದ ಕಲಾ-ತಾಲಸಾಹಿತ್ಯ ಯೋಗಾತ್ ॥
ತದ್ಗಾನಾತ್ ಸ್ವಾತ್ಮನಾದಶ್ರವಣ ರಸಮುಖಾದ್ ವಾಗ್ರಸೈಕಾನುಭಾವೇ
ಕ್ಲೃಪ್ತಾಃ ಷಡ್ಜಾದಿಸಂಜ್ಞಾಃ ಸರಿಗಮಪಧನೀತ್ಯಾದಿಸಂಕೇತವರ್ಣೈಃ ॥2॥

ಸರಸ್ವತಿಯು ತನ್ನಾತ್ಮದಲ್ಲಿ ಧ್ವನಿತವಾಗುವ ನಾದಗಳ ಶ್ರವಣದ ಉತ್ಕೃಷ್ಟ ರಸಾನುಭವದ ನಂತರ, ವಾಗ್ರಸದ ಅನುಭಾವ ರೂಪವಾದ ಆ ಏಳು ಸ್ವರಗಳಿಗೆ, ಗಾನದಿಂದ, ವೀಣಾ - ತಂತ್ರಿ, ಮೃದಂಗ, (ಶ್ರುತಿ)ಗಳು ನಿನಾದಿತ ಮಾಡುವ ಕಲೆಯನ್ನು, ತಾಲ ಮತ್ತು ಸಾಹಿತ್ಯ (ಗೀತಗಳ ಪದಾತ್ಮಕ ರೂಪ)ದ ಸಹಯೋಗದಿಂದ ಸ್ವರಗಳ ನಾದಾತ್ಮಕ ಗಾನದ ವಿಷಯದಲ್ಲಿ ಏಕಾಗ್ರಚಿತ್ತವುಳ್ಳವಳಾಗಿ "ಸರಿಗಮಪಧನಿ" ಮುಂತಾದ ಸಂಕೇತಾಕ್ಷರಗಳಿಂದ ಷಡ್ಜ ಮುಂತಾದವುಗಳನ್ನು ಕಲ್ಪಿಸಿದ್ದಾಳೆ.

ಏತಾಃ ಸಂಕ್ಷಿಪ್ತ ಸಂಜ್ಞಾಃ ಪ್ರಣವ ಇವ ಪರಬ್ರಹ್ಮಣಃ ಸತ್ತ್ವರಾಣಾಂ ।
ವಾ ಚಾ ಸೋಚ್ಛ್ವಾಸಯೋಗಾತ್ ತದನುಕರಣತೋ ವೇದಿತಾಸ್ತತ್ವವೇದ್ಯಾಃ ।
ಷಡ್ಜಸ್ತತ್ರರ್ಷಭೋऽನ್ಯಃ ಶ್ರವಣಸುಖ ಕರೋ ದಿವ್ಯ ಗಾಂಧಾರ ಸಂಜ್ಞೋ ।
ಮಧ್ಯಸ್ಥಃ ಪಂಚಮೋऽನ್ಯೋ ಮತಿಮನನಪರೋ ಧೈವತೋಂತ್ಯೋ ನಿಷಾದಃ ॥ 3 ॥

ಪರಬ್ರಹ್ಮನ ಸಂಕ್ಷಿಪ್ತ ಹೆಸರು ಪ್ರಣವದಂತಿದೆ. ಏಳು ಸ್ವರಗಳ ಸೂಕ್ಷ್ಮ (ಸರಿಗಮಪಧನಿ) ಮತ್ತು ತತ್ವವೇದ್ಯ ಸಂಜ್ಞೆಗಳಿಗೆ ವಾಣಿಯು ತನ್ನ ಉಚ್ಛ್ವಾಸಯೋಗದಿಂದ ಮತ್ತು ಆ ಸ್ವರಗಳ ಅನುಕರಣೆಯಿಂದ ಸಂಪೂರ್ಣ ತಿಳಿದುಕೊಂಡಿದೆ. ಆ ಸ್ವರಗಳಲ್ಲಿ ಷಡ್ಜ, ಋಷಭ, ಶ್ರವಣ-ಸುಖದ ಗಂಧಾರ, ಮಧ್ಯಸ್ಥಿತ ಮಧ್ಯಮ, ಮತ್ತೆ ಮತ್ತೆ ಅನುಸಂಧಾನದ ಪಂಚಮ, ಧೈವತ ಮತ್ತು ಅಂತಿಮ ನಿಷಾಧವೆಂಬ ಹೆಸರುಗಳಿಂದ ಸ್ವರಗಳು ಭಿನ್ನ ಭಿನ್ನವೆಂದೆನಿಸುತ್ತವೆ.

ವರ್ಣಾಸ್ತೇ ವಾಚಕಾಃ ಸ್ಯುಸ್ತದನುಕೃತಿಪರಾಃ ಸೂಕ್ಷ್ಮಸಂಕೇತರೂಪಾಃ ।
ತತ್ಸಂಜ್ಞಾದ್ಯಾಕ್ಷರಂ ತತ್ ಪರಮುಪಕರಣಂ ತತ್ತ್ವರಸ್ಯಾವಲಂಬೇ ।
ತಸ್ಮಾತ್ ಕಂಠ್ಯಸ್ವರೇಣ ಪ್ರತಿ-ವಿಲಸದಲಾಮಾದ್ಯಕಾರೇಣ ಯುಕ್ತಂ
ಏಕೇನೈವಾಕ್ಷರೇಣ ಪ್ರತಿನಿನದ ಮುಖಾದ್ ಗಾತುಮಿಷ್ಟಂ ಸಮಸ್ತಮ್ ॥ 4 ॥

ಷಡ್ಜಾದಿ ಸ್ವರಗಳ ಸೂಕ್ಷ್ಮ ಸಂಕೇತರೂಪವಾದ ಮತ್ತು ಆ ಆ ಸ್ವರಗಳ ಅನುಕರಣದಲ್ಲಿ ಪ್ರಣವ "ಸರಿಗಮಪಧನಿ" ಮುಂತಾದ ವರ್ಣಗಳು ಷಡ್ಜಾದಿ ಸ್ವರಗಳ ವಾಚಕವಾಗಿವೆ. ಆ ಆ ಸ್ವರಗಳು ಅವಲಂಬನದಲ್ಲಿ ಪರಮ ಉಪಕಾರಿಯಾಗಿವೆ, ಮತ್ತು ಷಡ್ಜಾದಿ ಸ್ವರ-ಸಂಜ್ಞಾಗಳಿಗೆ ಪ್ರಥಮ ಅಕ್ಷರಗಳಾಗಿವೆ. ಪಾಣಿನಿಯ "ಅಲ್" ಪ್ರತ್ಯಾಹಾರದಲ್ಲಿ "ಅ" ದಿಂದ "ಹ"ದ ವರೆಗೆ ಎಲ್ಲ ಸ್ವರ ಮತ್ತು ವ್ಯಂಜನಗಳ ಸಮಾವೇಶವಿದೆ. ಈ "ಅಲ್" ದ ಆದ್ಯ ಅಕ್ಷರ "ಅ"ಕಾರವಿದೆ. ಅದರ ಒಂದು ಕಂಠಸ್ವರ (ಅಕ್ಷರ)ದ ಯೋಗದಿಂದ ಈ ಎಲ್ಲ ಏಳೂ ಸ್ವರಗಳನ್ನು ಹಾಡಲು ಶಕ್ಯವಾಗುತ್ತದೆ.

ಸ್ವಾಂತಃ ಷಡ್ಜಾದಿ ಭೇದಾತ್ ಸ್ವರನಿರತಮನಃ ಪ್ರಾಣವಾಕ್ ಸಂವಿದಾಽಽತ್ಮನ್ ।
ವಾಚೋಪಾಂಶುಸ್ವರೇಣ ಪ್ರವಿರಲತಪಸಾ ಸೂಕ್ಷ್ಮ ಸನ್ಮಾನಸೇನ ।
ಸಾನುಸ್ವಾರೇಣ ತೂಷ್ಣೀಂ ಪ್ರತಿಪಿಹಿತ ಮುಖಾನ್ನಾಸಿಕಾನುಸ್ವರೇಣ
ಮೌನೇನಾಂತಃ ಸ್ವನಾದ ಶ್ರವಣ ಪರತಯಾ ಗೀಯತಾಂ ಸಾಮರಸ್ಯಾತ್ ॥ 5 ॥

ಹೇ ಆತ್ಮನ್, ಸ್ವರದಲ್ಲಿ ಮುಳುಗಿದ ಮನ, ಪ್ರಾಣ, ವಾಕ್ ಮತ್ತು ಸಂವಿತ್ತದಿಂದ, ಪವಿತ್ರ ತಪದಿಂಧ, ಉಪಾಂಶು ಸ್ವರದಿಂದ, ಸೂಕ್ಷ್ಮ ಮನದಿಂದ ಸಾನುಸ್ವಾರ ವಾಣಿಯಿಂದ, ಬಾಯಿ ತೆರೆಯದಲೇ ಮೂಗಿನ ಅನುಸ್ವಾರಾತ್ಮಕ ಸ್ವರಗಳಿಂದ, ಮೌನವಾಗಿದ್ದುಕೊಂಡು ತಮ್ಮೊಳಗಿನ ತಮ್ಮದೇ ಆದ ನಾದವನ್ನು ಕೇಳಲು ತತ್ಪರವಾಗಿದ್ದು, ತಮ್ಮ ಒಳಗಿನ ಷಡ್ಜಾದಿ ಭೇದದಿಂದ, ಸ್ಥಿತ ಸ್ವರಗಳಿಂದ ಸಾಮರಸ್ಯವಾಗಿ ಸದ್ದಿಲ್ಲದೇ ಹಾಡಬಹುದು.

ನಿತ್ಯಾಭ್ಯಾಸಾದಿಯೋಗಾತ್ ಸಮರಸಕಲಯಾ ಬಾಹ್ಯ ವೀಣಾದಿನಾದಾತ್ ।
ಸ್ವಾಂತರ್ವಾಕ್ ಸಂಸ್ವರೇಣ ಪ್ರತಿನಿಶಿತಹೃದಾ ಪ್ರಾಣನೋಚ್ಛ್ವಾಸನೇನ
ಸಾಧ್ಯಾ ಸಂಗೀತ ಶಾಸ್ತ್ರೇ ಸಕಲ ಗುಣಗುಣೈಃ ಸಂಹಿತಾ ಸತ್ವಪೂರ್ಣಾ
ಲೋಕೇ ವೇದೇಚ ಸಾಮ್ನಾ ಸ್ವರರಸಕಲಯಾ ವಾಕ್ ಪರಾ ಚಿತ್ಸಮಾನಾ ॥6॥

ತಪ್ಪದೇ ನಿತ್ಯವಾಗಿ ಮಾಡಿದ ಅಭ್ಯಾಸದಿಂದ, ಸಾಮರಸ್ಯದ ಕಲೆಯಿಂದ, ವೀಣಾ, ಮತ್ತು ಇತರ ವಾದ್ಯಗಳ ನಿನಾದದಿಂದ, ಒಳಗಿದ್ದ ವಾಕ್ಕಿನ ಸಮ್ಯಕ್ ಸ್ವರದಿಂದ, ಪ್ರಾಣದ ಪರಿಸ್ಪಂದನದಿಂದ ಮತ್ತು ನಿರ್ಮಲ ಹೃದಯದಿಂದ ಆ ಚಿತ್ -ಸದೃಶ ಸಮಗ್ರ ಗುಣಗಳಿಂದ ಯುಕ್ತ ಮತ್ತು ಸತ್ವಗುಣದಿಂದ ತುಂಬಿದ ಪರಾವಾಣಿಯ ಸಾಧನೆಯನ್ನು ಸಾಮ, ಸ್ವರ, ರಸದ ಕಲೆಯಿಂದ ಸಂಗೀತ ಶಾಸ್ತ್ರವನ್ನು ಲೋಕದಲ್ಲಿ (ವ್ಯವಹಾರದಲ್ಲಿ) ಮತ್ತು ವೇದದಲ್ಲಿ ಮಾಡಬೇಕು.

ವಾಣೀ ವೀಣಾಪ್ರವೀಣಾ ಚಿದನಲವದನಾ ಯಾ ಚತುಷ್ಪಾದಪೂರ್ಣಾ
ವೇದಾನಾಂ ಸಾ ಚತುರ್ಣಾಂ ಸುಚತುರವಚನಾ ದಿಕ್ ಚತುರ್ವಕ್ತ್ರವರ್ಣಾ ।
ಜಿಹ್ವಾಗ್ರೇ ಸಾಭ್ಯುದೀರ್ಣಾ ಸ್ವರ-ರಸ- ವಚನಾ ವಾಙ್ಮನಃ ಪ್ರಾಣಗುಣ್ಯಾ
ಸೌಮ್ಯಾ ಶೀರ್ಷಣ್ಯರಸ್ಯಾ ಸಮರಸರಸನಾಽಭ್ಯೇತಿ ಸರ್ವಾಗ್ರಗಣ್ಯಾ ॥ 7 ॥

ಯಾವುದು ನಾಲ್ಕು ಚರಣಗಳಿಂದ ಪೂರ್ಣವಿದೆಯೋ, ಯಾರ ಮುಖವು ಚಿತ್ತದ ಜ್ಯೋತಿಯಿಂದ ಬೆಳಗಿದೆಯೋ, ಯಾರು ವೀಣಾವಾದನದಲ್ಲಿ ಕುಶಲರೋ, ಯಾವುದು ನಾಲ್ಕೂ ವೇದಗಳ ದಿವ್ಯ ವಾಙ್ಮಯ ರೂಪದಿಂದ ವಿರಾಜಿಸುತ್ತದೆಯೋ, ಯಾವುದು ಚತುರ್ಮುಖ ಬ್ರಹ್ಮನ ಮುಖದಿಂದ ಸೂಸುವ ವರ್ಣಗಳಿಂದ ಭಿನ್ನವಾಗಿಲ್ಲವೋ, ಯಾವುದು ಚತುರ ವಚನಗಳಿಂದಿದೆಯೋ, ಯಾವುದರ ವಚನ, ಸ್ವರ ಮತ್ತು ರಸಗಳಿಂದೊಡಗೂಡಿದೆಯೋ, ಯಾವುದು ವಾಕ್, ಮನ ಮತ್ತು ಪ್ರಾಣದ ಮುಖಾಂತರ ಅಹ್ವಾನಕ್ಕೆ ಯೋಗ್ಯವಾಗಿದೆಯೋ, ಯಾವುದು ಶೀರ್ಷಣ್ಯವಿದ್ದು ಮತ್ತು ಉತ್ತಮೋತ್ತಮ ಉಪಾಸನೆಗೆ ರಸಾಸ್ವಾದ ತಂದ್ದೊಡುತ್ತದೆಯೋ, ಆ ವಾಣಿಯು ನಾಲಿಗೆಯ ತುದಿಯಲ್ಲಿ ಉಚ್ಚಾರಿತವಾಗುತ್ತಲೇ ಸಾಮರಸ್ಯದ ಚರ್ವಣದಿಂದ ಅದು ಸರ್ವತೋಪರಿ ಅಗ್ರಗಣ್ಯವಾಗುತ್ತದೆ.

ಗಾಯತ್ರೀ ವೇದಮಾತಾ ಸ್ವರರಸವಚನಾ ಗಾಯತಿ ಬ್ರಹ್ಮಪೂರ್ಣಂ ।
ಪ್ರತ್ಯಕ್ಷಂ ಸ್ವಾತ್ಮಸತ್ತ್ವಂ ವಿತರತಿ ಸರಸಂ ಬ್ರಹ್ಮಣಸ್ಪತ್ಯುದೀರ್ಣಮ್ ।
ಗಾಯುತಂ ತ್ರಾಯತೇ ಸಾ ಸ್ರವದಮೃತರಸೈಃ ಪ್ರಾಣಸಂವಿತ್ಪ್ರದಾನಾದ್ ।
ವಿದ್ಯುಜ್ಜ್ಯೋತಿಶ್ಚಿದೈಂದ್ರೀ ನಿಜನಿಖಿಲಜಗತ್‌ಸಂಸವಿತ್ರೀ ಪ್ರಕಾಶ್ಯಃ ॥ 8 ॥

ಸ್ವರ ಮತ್ತು ರಸರೂಪ ವಚನವುಳ್ಳ ವೇದಮಾತಾ ಗಾಯತ್ರೀ ದೇವಿಯು ಸಂಪೂರ್ಣ ವೇದವನ್ನು ಹಾಡುವ ವೇದಜ್ಞನಿಗೆ ತನ್ನ ರಸ ಮತ್ತು ರಹಸ್ಯಮಯ ಆತ್ಮ ತತ್ವವನ್ನು (ಅವನ ಸಮಕ್ಷ) ಸ್ಪಷ್ಟವಾಗಿ ಪ್ರಕಾಶಿಸಿ ಪೂಜ್ಯ ಬ್ರಹ್ಮಣಸ್ಪತಿಯ ಪದವನ್ನು ತಂದುಕೊಡುತ್ತಾಳೆ ಅವಳು ಹೊರ ಸೂಸುವ ಅಮೃತದ ಕಾರಂಜಿಯಿಂದ ಪ್ರಾಣ ಮತ್ತು ಸಂವಿತ್ತದ ವರದಾನ ಮಾಡಿ ತನ್ನ ಗುಣಗಳಿಂದ ಗಾಯಕನನ್ನು ರಕ್ಷಿಸುತ್ತಾಳೆ.

ಈ ರೀತಿಯಿಂದ ಸಮಸ್ತ ವಿಶ್ವ ಚೇತನಕ್ಕೆ ಮುಕ್ತದಾನ ಕೊಡುವ ಜ್ಞಾನಮಯಿ ಪ್ರಾಚಿಯು ವಿದ್ಯುದ್ ಜ್ಯೋತಿಯ ಪ್ರಕಾಶವನ್ನೀಯುತ್ತಾಳೆ.

ವೇದಾತ್ಮಾ ಜ್ಞಾನಭೂಮಾ ಸಕಲರಸತಮಾ ಸರ್ವವಿತ್ ಸಾರ್ವಭೌಮಾ ।
ವೇದ್ಯಾವೇದ್ಯಾಭಿರಾಮಾ ಭಗವದವಗಮಾ ವಿಶ್ವವಿದ್ಯಾವಿರಾಮಾ ।
ಸಂಗೀತಂ ಸರ್ವವಿದ್ಯಾಸಮರಸಮುದಿತಂ "ಶ್ರೀಕಲಾಭಾರತಿ" ಸಾ
ಸ್ವೀಕುರ್ಯಾತ್ ಪೂರ್ಣಭಾವಾದ್ ಭಗವದನುಗತಂ ದೈವರಾತಾ" ಭಿಗೀತಮ್ ॥9॥

ವೇದವೇ ಯಾರ ಆತ್ಮವಾಗಿದೆಯೋ, ಜ್ಞಾನದ ಪರಾಕಾಷ್ಠೆ ಯಾವುದಾಗಿದೆಯೋ, ಯಾವುದು ಎಲ್ಲ ರಸಗಳಿಂದ ಒಡಗೂಡಿದೆಯೋ, ಯಾವುದು ಸರ್ವಜ್ಞ ಸ್ವರೂಪ ಮತ್ತು ಸಾರ್ವಭೌಮ ಶಕ್ತಿಯಿಂದ ಯುಕ್ತವಾಗಿದೆಯೋ, ವೇದ್ಯ ಮತ್ತು ಅವೇದ್ಯ ವಸ್ತುಗಳಿಂದ ಯಾವುದು ಮನೋಮಯಿಯಾಗಿದೆಯೋ, ಯಾವುದು ಭಗವಂತನ ಅನುಭಾವ ಶಕ್ತಿಯಾಗಿದೆಯೋ, ಎಲ್ಲ ವಿದ್ಯೆಗಳ ವಿರಾಮರೂಪವಾಗಿದೆಯೋ ಅಂಥ ಈ "ಶ್ರೀ ಕಲಾ" ರೂಪದ ಭಾರತೀ – ವಾಗ್ದೇವತಾ ಭಗವಂತನ ಗುಣಾನುವಾದದಲ್ಲಿ ನಿರತಳಿದ್ದು ಎಲ್ಲ ವಿದ್ಯೆಗಳ ಸಮರಸದಿಂದ ಉಲ್ಲಸಿತ, ಛಂದೋಮಯಿ ವಾಣಿಯಲ್ಲಿ "ದೇವರಾತ" ದಿಂದ ಹಾಡಲ್ಪಟ್ಟ ಈ ಸಂಗೀತವನ್ನು ಪೂರ್ಣಭಾವದಿಂದ ಸ್ವೀಕರಿಸಬೇಕು ಎಂದು (ನಿಮ್ಮಲ್ಲಿ) ಪ್ರಾರ್ಥನೆ.

|| ಶ್ರೀ ||

ಮಂಗಲಾಚರಣೆ

ಓಂ ಗಾಯಂತಿ–ತ್ವಾ ಗಾಯತ್ರಿಣೋರ್ಚಂತ್ಯರ್ಕಮರ್ಕಿಣಃ
ಬ್ರಹ್ಮಾಣತ್ವಾ ಶತಕ್ರತ ಉದ್ ವಂಶಮಿವಯೇಮಿರೇ ।

– (ಋಕ್ 1/10/1) ಮಧುಶ್ಛಂದಾಃ

ಮಂಗಲ ಪದ್ಯಂ

ಶ್ರೀಮದ್ಭಾರತ ಮಾತೃಭೂಮಿವಿಜಯ ಸ್ವಾತಂತ್ರ್ಯ ಸಂಧಾಯಿನೀ
ಶ್ರೀಶಾತ್ಮಾಮೃತ ಸದ್ರಸ ಸ್ವರಕಲಾಸ್ವಾನಂದ ಸಂದೋಹಿನೀ ।
ವೀಣಾ ಪುಸ್ತಕ ಮಾಲಿಕಾऽಭಯಕರಾಸೌಭಾಗ್ಯದಾಭಾಸ್ವತೀ
ಶ್ರೀ ಸಂಗೀತ ಕಲಾಸುಧಾ ವಿತರಣಾತ್ ಸಮ್ರಾಜತೇ ಭಾರತೀ ॥

ಎಲ್ಲ ಕಲೆಗಳಲ್ಲಿ ಸಂಗೀತ ಕಲೆಯು ಶ್ರೇಷ್ಠವಾದುದೆಂದು ತಾವು ಬಲ್ಲಿರಿ. ಆದ್ದರಿಂದ ಅದು ಅಗ್ರಸ್ಥಾನಗಳಿಸಿದೆ. ಅದನ್ನು ಸಾಮರಸದ ದೇವತೆಯೆಂದು ಅನ್ನುವರು. ಆದ್ದರಿಂದ ಎಲ್ಲ ಶುಭ ಮುಹೂರ್ತ ಮಹೋತ್ಸವದ ಕಾಲದಲ್ಲಿ ಮಂಗಲರೂಪವಾದ ಸಂಗೀತ ದೇವತೆಯ ಉಪಾಸನೆಯನ್ನು ಮಾಡುತ್ತಾರೆ.

ಇದು ಯೋಗವಿದ್ಯೆ ಬ್ರಹ್ಮವಿದ್ಯೆ, ಮತ್ತು ದೇವವಿದ್ಯೆಯಂತೆ ದಿವ್ಯಸತ್ವದಿಂದ ಪರಿಪೂರ್ಣ ಮಹಾವಿದ್ಯೆಯಾಗಿದೆ ಎಂದರೆ ಅತಿಶಯೋಕ್ತಿಯಾಗುವುದಿಲ್ಲ. ವೇದವು ಈ ಸಂಗೀತವಿದ್ಯೆಯ ಮೂಲಸ್ಥಾನವೆಂದು ಪರಿಗಣಿಸಲ್ಪಟ್ಟಿದೆ. ಸಾಮವೇದದಲ್ಲಿ ಸ್ವರ ಮತ್ತು ರಸ ಮುಖ್ಯ. ವೇದಗಳಲ್ಲಿ ಸ್ವರವಿಲ್ಲದ ಒಂದೂ ಮಂತ್ರ ಸಿಗುವುದಿಲ್ಲ. ಪ್ರತಿಯೊಂದು ಶಬ್ದ ಮತ್ತು ಅಕ್ಷರದಲ್ಲಿ ಸ್ವರವಿದೆ.

ಪೂರ್ಣ ಬಿಂದು ಎಲ್ಲ ಸ್ವರಗಳ ಮತ್ತು ಅಕ್ಷರಗಳ ಮೂಲ ಬೀಜವಿದೆ. ಅದಕ್ಕೆ ಅನುಸ್ವಾರವೆನ್ನುತ್ತಾರೆ.

ಬಾಯಿಮುಚ್ಚಿ ಕೇವಲ ಮೂಗಿನಿಂದಲೇ ಅನುಸ್ವಾರದ ಉಚ್ಚಾರ ಸಾಧ್ಯವಾಗುತ್ತದೆ. ಮೂಗಿನಿಂದ ಹೊರಬೀಳುವ ಅನುಸ್ವಾರವು ಒಂದು ವರ್ಣವೂ ಅದಕ್ಕೆ "ಸುರ" ಎಂದೆನ್ನುತ್ತಾರೆ. ಆ ಅನುಸ್ವಾರವು ಕೇವಲ ಮೂಗಿನಿಂದಲೇ ಹೊರಬೀಳುತ್ತದೆ.

ಇದರಿಂದಲೇ ಸಂಗೀತದಲ್ಲಿ ಎಲ್ಲಕ್ಕಿಂತಲೂ ಮೊದಲನೆಯ ಸುರವೆಂದು ಇದನ್ನು ತೆಗೆದುಕೊಳ್ಳುತ್ತಾರೆ. ಈ ಪೂರ್ಣಬಿಂದುವಿನಿಂದಲೇ ಎಲ್ಲ ಅಕ್ಷರಗಳು ಉದ್ಭವಿಸಿವೆ. ಆ ಅಕ್ಷರಗಳಲ್ಲಿ ಅಕಾರವೇ ಮೊದಲನೆಯದು. ಅದು ಎಲ್ಲ ವರ್ಣಗಳಲ್ಲಿ ನಿಂತಿರುತ್ತದೆ. ಅದರ ಸ್ಥಾನವು ಕಂಠವು. **"ಅಕುಹ ವಿಸರ್ಜನಿಯಾನಾಂ ಕಂಠಃ"** ಆದ್ದರಿಂದ ಸಂಗೀತಕ್ಕೆ ಕಂಠವೇ ಮುಖ್ಯವಾದ ಇಂದ್ರಿಯವಾಗಿರುತ್ತದೆ. ಈ ಕಂಠವು ಶುದ್ಧವೂ ಮತ್ತು ಸುಸ್ವರವೂ ಆಗಿರಲಾಗಿ ಸಂಗೀತ ಕಲೆಯು ಶೋಭೆಗೊಳ್ಳುತ್ತದೆ.

ಎಲ್ಲ ವರ್ಣಗಳ ಉಚ್ಚಾರಕ್ಕಾಗಿ ಎಂಟು ಸ್ಥಾನಗಳಿವೆ.

ಅಷ್ಟೌ ಸ್ಥಾನಾನಿ ವರ್ಣಾನಾಂ ಉರಃ ಕಂಠಃ ಶಿರಸ್ತಥಾ ।
ಜಿಹ್ವಾ ಮೂಲಂ ಚ ದಂತಾಶ್ಚ ನಾಸಿಕೋಷ್ಟೌ ಚ ತಾಲುಚ ॥

– ವೇದಾಂಗ ಶಿಕ್ಷಾ

ಸ್ವರವೇ ಎಲ್ಲ ಅಕ್ಷರಗಳಿಗೆ ಮೂಲವಾಗಿದ್ದು ಅದಕ್ಕೆ 'ನಾದಬ್ರಹ್ಮ' ವೆಂಧು ಎನ್ನುತ್ತಾರೆ. ಆ ನಾದದ ಮೂಲಬೀಜ 'ಪೂರ್ಣಬಿಂದು' ಆಗಿದೆ. ಆ ಪೂರ್ಣಬಿಂದುವಿಗೆ ಕಲೆಯೇ ಮಾತೆಯಾಗಿದ್ದಾಳೆ. ಅದನ್ನು 'ಅಮಾತ್ರಾ' ಎಂದು ಮನ್ನಿಸಿದ್ದಾರೆ. ಪೂರ್ಣಬಿಂದುವು ಮಾತ್ರಾ ಇರದಂತೆ ಕಲೆಯೂ ಮಾತ್ರಾ ಇರುವುದಿಲ್ಲ. ಕಲೆಯು ಎಲ್ಲವನ್ನು ಅಳೆಯಬಲ್ಲದು. ಆದರೆ ಕಲೆಯನ್ನು ಇನ್ಯಾವುದೂ ಅಳೆಯಲು ಸಾದ್ಯವಿಲ್ಲ.

ಈ ನಾದಬಿಂದು ಕಲೆಯನ್ನು ದಾಟಿ ಪರಬ್ರಹ್ಮನಿದ್ದಾನೆ. ಅವನ ವಾಚಕ ಶಕ್ತಿಯೇ ಪರಾವಾಣಿಯು. ಆವಾಣಿಯ ಮೂಲ ಸ್ವರೂಪವು ಅವ್ಯಕ್ತ ಶಬ್ದವು.

'ಣದ್ ಅವ್ಯಕ್ತೇ ಶಬ್ದೇ' ಈ ಅವ್ಯಕ್ತವು ಅತ್ಯಂತ ಸೂಕ್ಷ್ಮವಾಗಿದ್ದು ವಾಗ್ದೇವಿಯ ಮೂಲ ತತ್ವವಾಗಿದ್ದು ಆಕಾಶದಲ್ಲಿ ಸದಾ ಗುಪ್ತರೂಪದಲ್ಲಿ ವ್ಯಾಪ್ತವಾಗಿರುತ್ತದೆ. ಅದು ವಿದ್ಯುತ್ ಶಕ್ತಿ ಅಂದರೆ ಅದರ ತೇಜವನ್ನು ಕೂಡಿ ವ್ಯಕ್ತವಾಗುತ್ತದೆ. ಅದರ ಒಂದೇ ನಾದದಲ್ಲಿ ಮೂರು ತತ್ವಗಳಿವೆ. ಅವು ಸ್ವರ, ರಸ, ಮತ್ತು ಪ್ರಕಾಶ. ನಿಜವಾಗಿ ಇದು ಚೇತನ ಶಕ್ತಿಯ ಸತ್ವವು. ಆ ವಾಣಿಯನ್ನೇ "ಅನುಷ್ಟುಪ್" ಎಂದೆನ್ನುತ್ತಾರೆ.

"ಆತ್ಮಾನಂ ಅನುಸ್ತೌತೀತಿ ಅನುಷ್ಟುಪ್"

ಇದೇ ನಿಜವಾಗಿ ಅನುಸ್ವಾರದ ಸ್ವರೂಪವು

"ಆತ್ಮಾನಂ ಅನುಸ್ವರತೀತಿ ಅನುಸ್ವಾರಃ" ಇದಕ್ಕೇ ಅನುಜ್ಞಾಕ್ಷರವೆಂದನ್ನುತ್ತಾರೆ. ಇದು ವಾಣಿಯ ಸಾಂಕೇತಿಕ ಸಂಜ್ಞೆಯಿದ್ದು ವಾಚಕ ಸಂಜ್ಞೆಯಲ್ಲ. ಆ ಅವ್ಯಕ್ತ ನಾದವು ಆಕಾಶದಲ್ಲಿ ಗುಪ್ತರೂಪದಲ್ಲಿ ವ್ಯಾಪ್ತವಿರುವಂತೆ ಪ್ರಾಣಗಳ ಶರೀರದಲ್ಲಿ, ತಲೆಯಲ್ಲಿಯೂ ವ್ಯಾಪ್ತವಾಗಿರುತ್ತದೆ. ಇದನ್ನು "ಅನಾಹತ" ನಾದವೆಂದು ಕರೆಯುತ್ತಾರೆ. ಇದು ಬಾರಿಸದಲೇ ಕೇಳಿ ಬರುವ ನಾದವು. ಇದರ ಸಂಬಂಧವು Spinal Chord ಅಂದರೆ ಕುಂಡಲಿನೀ ಎಂಬ Dynamic ಗತಿಶೀಲ ನಾಡಿ ಸುಷುಮ್ನಾದೊಂದಿಗೆ ಇರುತ್ತದೆ. ಅದೇ

ದೇವವಾಣಿಯೆಂದು ಅನ್ನಿಸಿಕೊಳ್ಳುತ್ತದೆ. ಈ ಸಂಗೀತವು ಛಂದಸ್ಸಿನಿಂದ ಕಟ್ಟಲ್ಪಟ್ಟಿದೆ. ಸಂಗೀತದ ಸ್ವರವು ಛಂದಸ್ಸಿನಿಂದ ಅಡಗಿಕೊಂಡಿರುತ್ತದೆ. ಛಂದಸ್ಸೇ ಅದರ ಆಚ್ಛಾದನ. ಸ್ವರದ ರಕ್ಷಣೆಗಾಗಿ ಕವಚದಂತೆ ಛಂದಸ್ಸು ಸ್ವತಃ ಸಿದ್ಧವಾಗಿರುತ್ತದೆ.

"ಯದಚ್ಛಾದಯತ್ ತಚ್ಛಂದಸಾಂ ಛಂದಸ್ತ್ವಮ್"

ಈ ವಿಷಯದಲ್ಲಿ ಒಂದು ರೂಪಕ ಕಥೆಯನ್ನು ಉಪನಿಷತ್ತಿನಲ್ಲಿ ಹೇಳಿದ್ದಾರೆ. ದೇವ ಅಸುರರ ಯುದ್ಧದಲ್ಲಿ ಮೃತ್ಯುವಿಗಂಜಿ ದೇವತೆಗಳು ಅಡಗಿಕೊಂಡರು. ಅಸುರರು ಅವರನ್ನು ಹುಡುಕಿ ಹಿಡಿದರು. ಆನಂತರ ಅವರು ಋಕ್, ಯಜು, ಸಾಮ, ವೇದಗಳಲ್ಲಿ ಅಡಗಿಕೊಂಡರು. ಅಲ್ಲಿಯೂ ಅವರನ್ನು ಅಸುರರು ಹುಡುಕಿ ಹಿಡಿದರು. ಅಂತ್ಯದಲ್ಲಿ ಅವರು ವೇದ ಮಂತ್ರಗಳಲ್ಲಿನ ಸ್ವರಗಳಲ್ಲಿ ಗುಪ್ತ ರೀತಿಯಿಂದ ಅಡಗಿಕೊಡರು. ಆಗ ಮಾತ್ರ ಅವರನ್ನು ಅಸುರರಿಗೆ ಹುಡುಕಿ ಹಿಡಿಯಲಾಗಲಿಲ್ಲ. ಅಂದರೆ ಆ ಛಂದಸ್ಸಿನ ಸ್ವರಗಳಿಂದಲೇ ದೇವತೆಗಳ ಸಂರಕ್ಷಣೆ ಸಾಧ್ಯವಾಯಿತು. ವೇದಗಳ ರಕ್ಷಣೆ ಕೂಡಾ ಛಂದಸ್ಸಿನಿಂದಲೇ ಆಗುತ್ತದೆ. ಛಂದಸ್ಸಿನ ಸಂರಕ್ಷಣೆ ಕೂಡಾ ಛಂದಸ್ಸಿನಿಂದಲೇ ಆಗುತ್ತದೆ. ಛಂದಸ್ಸಿನ ಸಂರಕ್ಷಣ ಸ್ವರದಿಂದಲೇ ಇರುತ್ತದೆ. ಆ ಸ್ವರವು ಛಂದಸ್ಸಿನಲ್ಲಿ ಅಡಗಿದ ಒಂದು ಗುಪ್ತ ರಸವು. ಅದು ಅಮೃತ ರಸವೇ ಆಗಿರುತ್ತದೆ. ಈ ಮಾತನ್ನು ಸಾಮವೇದದ ಛಾಂದೋಗ್ಯ ಉಪನಿಷತ್ತಿನಲ್ಲಿ ಒಂದು ಕಥೆಯ ರೂಪದಲ್ಲಿ ಹೇಳಿರುವುದು.

"ದೇವಾ ವೈ ಮೃತ್ಯೋರ್ಬಿಭ್ಯತಸ್ತ್ರಯೀಂ ವಿದ್ಯಾಂಪ್ರಾವಿಶನ್
ತೇ ಛಂದೋಭಿರಾಚ್ಛಾದಯನ್, ಯದೇಭಿರಾಚ್ಛಾಯದನ್
ತಚ್ಛಂದಸಾಂ ಛಂದಸ್ತ್ವಮ್"

– (ಛಾಂ. ಉ. 1–4–2)

ಅದೇ ಓಂಕಾರ ರೂಪದ ನಾದವನ್ನು ನಾದಬ್ರಹ್ಮವೆಂದಿದ್ದಾರೆ. ಈ ನಾದದ ಉಪಾಸನೆಯಿಂದ ದೇವತೆಗಳು ಅಮೃತತ್ವವನ್ನು ಪಡೆದು ಅಭಯ ಹೊಂದಿದ್ದರು.

ಆ ಛಂದಸ್ಸು ಅನೇಕ ಪ್ರಕಾರದ್ದಿದೆ. ಅದರಲ್ಲಿ ಗಾಯತ್ರಿ ಛಂದಸ್ಸು ಮೊದಲಿನದು.

ವೇದಾಂಗ ಛಂದಸೂತ್ರದ ದರ್ಶನಕಾರರಾದ ಪಿಂಗಲ ಮುನಿಯ ಪ್ರತಿಜ್ಞಾ ಸೂತ್ರವಿಂತಿದೆ.

"ಛಂದೋ ಗಾಯತ್ರೀ ದೈವ್ಯೇಕಮ್" ಅಂದರೆ ಆ ಛಂದಸ್ಸು ಎಲ್ಲರ ಮೊದಲಿದ್ದ ಗಾಯತ್ರಿಯಾಗಿದೆ. ಒಂದು ಅಕ್ಷರದಿಂದ ಷುರುವಾಗುತ್ತದೆ. ಒಂದು ಅಕ್ಷರದ ಛಂದಸ್ಸಿಗೆ "ದೈವೀಗಾಯತ್ರೀ" ಎಂದಿದ್ದಾರೆ. ನಾರಾಯಣ ಉಪನಿಷತ್ತಿನಲ್ಲಿ ಸ್ಪಷ್ಟವಾಗಿ ಹೇಳಿದ್ದಾರೆ. **'ಓಮಿತ್ಯೇಕಾಕ್ಷರಂ ಬ್ರಹ್ಮ ಅಗ್ನಿರ್ದೇವತಾ ಬ್ರಹ್ಮ ಇತ್ಯಾರ್ಷಮ್ । ಗಾಯತ್ರಂ ಛಂದಂ ಪರಮಾತ್ಮಂ ಸರೂಪಮ್, ಸಾಯುಜ್ಯಂ ವಿನಿಯೋಗಮ್ ।** 'ಓಂ' ಎಂಬ ಏಕಾಕ್ಷರ ರೂಪವು ಪ್ರತ್ಯಕ್ಷ ಪರಬ್ರಹ್ಮವು. ಇದರ ದೇವತಾ ಅಗ್ನಿಯು. ಪರಬ್ರಹ್ಮನೇ ಇದರ ದ್ರಷ್ಟಾ ಋಷಿಯಾಗಿದ್ದಾನೆ. ಗಾಯತ್ರಿಯ ಛಂದಸ್ಸಿದೆ. ಪರಮಾತ್ಮನೇ ಇದರ ನಿರೂಪನಿದ್ದಾನೆ.

ಅಂದರೆ ಪರಮಾತ್ಮನ ರೂಪವೇ ಈ ಅಕ್ಷರದ ಸ್ವರೂಪವಿದೆ. ಆ ಪರಬ್ರಹ್ಮ ವಸ್ತುವಿನೊಡನೆ ಸಾಯುಜ್ಯ ಪಡೆಯಲು ಅಂದರೆ ಏಕರೂಪವಾಗಲು ಈ ವರ್ಣದ ಅಕ್ಷರದ ವಿನಿಯೋಗ ಮಾಡುತ್ತಾರೆ. ಮತ್ತು ಉದ್ಗೀಥ ಮುಂತಾದ ಗುಣಗಳಿಂದ ಉಪಾಸನೆ ಮಾಡುತ್ತಾರೆ.

"ಓಮಿತ್ಯೇತದಕ್ಷರಮುದ್ಗೀಥಮುಪಾಸೀತ" ।

– (ಛಾಂಉ. 1/4/1)

ಇದರಂತೆ ಋಗ್ವೇದದಲ್ಲಿ ಹಾಡಲು ಉಪದೇಶ ಮಾಡಿದ್ದಾರೆ.

"ಗಾಯಂತಿ ತ್ವಾ ಗಾಯತ್ರಿಣಃ" ಅಂದರೆ "ಹೇ ಶತಕ್ರತೋ ಇಂದ್ರ" ॥ ಗಾಯತ್ರೀ ಛಂದಸ್ಸಿನಿಂದ ನಿನ್ನನ್ನು ಹಾಡುತ್ತಾರೆ ಮತ್ತು ಇನ್ನಿತರ ಋಙ್ಮಂತ್ರದ ಜನರು ಆ ಋಚಗಳಿಂದ ನಿನ್ನನ್ನು ಅರ್ಚಿಸುತ್ತಾರೆ. ಈ ರೀತಿಯಲ್ಲಿ ಗಾಯನ ಮತ್ತು ಅರ್ಚನ ರೂಪಿ ಸಾಧನೆಯಿಂದ ಪ್ರತ್ಯಕ್ಷ ಬ್ರಹ್ಮರೂಪಿ ವೇದ ಮಂತ್ರವನ್ನು ಪಠಿಸುವ ಬ್ರಾಹ್ಮಣರು ನಿನ್ನನ್ನು ಪತಾಕದಂತೆ ಎತ್ತರದಲ್ಲಿರುವಿಯೆಂದು ತಿಳಿಯುತ್ತಾರೆ. ಆದ್ದರಿಂದ ವೇದದಲ್ಲಿ ಆ ಇಂದ್ರನಿಗಾಗಿ ಸಾಮ ಹಾಡಲು ಉಪದೇಶಿಸಿದ್ದಾರೆ.

'ಇಂದ್ರಾಯ ಸಾಮಗಾಯತ"

ಯಾವ ಇಂದ್ರನು ಜ್ಞಾನಿ ಮತ್ತು ಮಹಾನ್ ಇದ್ದಾನೋ ಮತ್ತು ಹಾಡಲೆಂದು ಸಸ್ವರ ವೇದ ಮಂತ್ರಗಳ ಅವಿಷ್ಕಾರ ಮಾಡಿದ್ದಾನೋ ಮತ್ತು ಯಾರು ಅದರ ತತ್ವವೇತ್ತಾನಿದ್ದಾನೋ ಆ ಇಂದ್ರನಿಗಾಗಿ 'ಬೃಹತ್ ಸಾಮ' ಅಂದರೆ ಬಹಳ ವ್ಯಾಪಕ,. ಪೂಜನೀಯ ಗೀತ ಹಾಡುವ ವಿಧಾನ ಮಾಡಿರುತ್ತಾರೆ. ಈ ಸಾಮಗಾನದ ಅರ್ಥ ಬಹಳ ವಿಚಿತ್ರವಿದೆ. ಉಳಿದೆಲ್ಲ ವಸ್ತು ಮತ್ತು ವಿಷಯಗಳಿಂದ ಅದು ವಿಲಕ್ಷಣವಿದೆ. ಅತ್ಯಂತ ಗೂಢವಾಗಿದೆ. ಋಙ್ಮಂತ್ರಗಳಲ್ಲಿರುವ ಸ್ವರದ ಗಾಯನವೇ ಸಾಮಗಾನವು.

ಸಾಮವೇದದ ಎಲ್ಲಾ ಮಂತ್ರಗಳು ಮೂಲತಃ ಋಗ್ವೇದದಲ್ಲಿನವೇ. ಅದರಲ್ಲಿ ಉದಾತ್ತ, ಅನುದಾತ್ತ, ಮತ್ತು ಸ್ವರಿತ ಎಂಬ ಮೂರು ಸ್ವರಗಳು ಪ್ರಸಿದ್ಧವಾಗಿವೆ. ಈ ಸ್ವರಗಳಲ್ಲಿ ಗಾಯನದ ಮೂಲಸತ್ವ ತುಂಬಿರುವುದು, ಅದರ ಅವಲಂಬನದಿಂದ ಸಂಗೀತದ ಎಲ್ಲಾ ಸಾಗರವನ್ನು ಹಾಡಬಹುದು ಮತ್ತು ಪರವಸ್ತುವಿನ ಹತ್ತಿರ ಹೋಗಬಹುದು.

ಆ ಋಷಿಗಳಲ್ಲಿಯೇ ಸಾಮಸ್ವರ-ಪ್ರಗಾಢ, ಗಂಭೀರ ರೂಪದಿಂದ ಕೂಡಿಕೊಂಡಿದೆ.

"ತಸ್ಮಾತ್ ಋಚಿ ಅಧ್ಯೂಢಂ ಸಾಮ ಗೀಯತೇ" (ಛಾಂ.ಉ. 1–6–1)

ಆ ಸ್ವರವು ಪ್ರಣವಾಕ್ಷರದಲ್ಲಿಯೂ ಇದೆ. ಆ ಸ್ವರದಲ್ಲಿ ಅವಾಂತರ ಏಳೂ ಸ್ವರಗಳು ಅಡಗಿಕೊಂಡಿವೆ. ಆದ್ದರಿಂದ ಈ ಒಂದೇ ಅಕ್ಷರದಿಂದ ಆ ಏಳೂ ಸ್ವರಗಳ ಗಾಯನ ಮಾಡಲಾಗುತ್ತದೆ.

"ಅಕ್ಷರೇಣ ಮಿಮತೆ ಸಪ್ತವಾಣೀಃ" (ಋ 1/10/24)

ಯಾವನು ಈ ಛಂದಸ್ಸುಗಳನ್ನು ಸುರಿಸುವ ವಿಶ್ವರೂಪನಿರುವನೋ ಆ ಇಂದ್ರನು ಆ ಛಂದಸ್ಸುಗಳ ಅಮೃತರಸದಿಂದಲೇ ಪ್ರಕಾಶಿತನಾಗಿದ್ದಾನೆ. ಅಂದರೆ ವೇದವಾಣಿಯ ಮುಖದಿಂದಲೇ ಇಂದ್ರನ ಜ್ಞಾನವಾಗುತ್ತದೆ.

"ಯಶ್ಛಂದಸಾಮೃಷಭೋ ವಿಶ್ವರೂಪಃ ಛಂಧೋಭ್ಯೋS
ಧ್ಯಮೃತಾತ್ ಸಂಬಭೂವ ಸ ಮೇಂದ್ರೋ ಮೇಧಯಾ ಸ್ಪೃಣೋತು"

–(ತೈ. ಉ.ಶಿ. 4/1)

ಯಾವ ಋಚಗಳ ಅಕ್ಷರಗಳಲ್ಲಿ ಸಾಮಸ್ವರ ಮತ್ತು ಸಮರಸ ತುಂಬಿರುವದೋ ಆ ಎಲ್ಲ ಋಚೆಗಳ ಮೂಲ ಬೀಜವೇ ಪ್ರಣವಾಕ್ಷರವಿದೆ. ಅದರ ಅನುಕರಣೆ "ಓಂ" ದಿಂದಾಗುತ್ತದೆ.

ಓಂ ಇತ್ಯೇತದನುಕೃತಿ ಹಸ್ಮ ವಾ ಅಪ್ಯೋ ಶ್ರಾವಯೇ
ತ್ಯಾಶ್ರಾವಯಂತಿ । ಓಮಿತಿ ಸಾಮಾನಿ ಗಾಯಂತಿ । – (ತೈ.ಉ.ಶಿ. 8)

ಈ ರೀತಿಯಿಂದ ಓಂಕಾರವು ಎಲ್ಲ ವೇದಗಳ ಸಾರವಾಗಿದೆ. ಎಲ್ಲ ತಪಸ್ಸುಗಳ ಮೂಲವಾಗಿದೆ. ಬ್ರಹ್ಮಚರ್ಯ ಆದಿ ಎಲ್ಲ ವ್ರತಗಳ ಮೂಲವಾಗಿದೆ.

ಸರ್ವೇ ವೇದಾ ಯತ್ಪದಮಾಮನಂತಿ, ತಪಾಂಸಿ
ಸರ್ವಾಣಿ ಚ– ಯದ್ವದಂತಿ । ಯದಿಚ್ಛಂತೋ ಬ್ರಹ್ಮಚರ್ಯಂ
ಚರಂತಿ, ತತ್ತೇ ಪದಂ ಸಂಗ್ರಹೇಣ ಬ್ರವೀಮಿ ॥
ಓಮಿತ್ಯೇತತ್ – (ಕಠ, ಉ. 1/2/15)

ಅಂತರಾತ್ಮಾ ಮತ್ತು ಪರಮಾತ್ಮಾ ಇವರ ಧ್ಯಾನವನ್ನು ಓಂಕಾರದಿಂದಲೇ ಮಾಡಬೇಕೆಂದು ಉಪದೇಶವಿದೆ.

"ಓಮಿತ್ಯೇವಂ ಧ್ಯಾಯತ ಆತ್ಮಾನಂ ಸ್ವಸ್ತಿ ವಃ
ಪಾರಾಯ ತಮಸಃ ಪರಸ್ತಾತ್ (ಮು. 2–2–6)

ಈ ಪ್ರಣವ ಉಪಾಸನೆಯಲ್ಲಿ ಮತ್ತೊಂದು ವೈಚಿತ್ರವಿದೆ. ಗುರಿಯಲ್ಲಿ, ಲಕ್ಷವಿಡುವಂತೆ, ಬಂದೂಕು ಕಲಿಯುವಾಗಿನ ಅಥವಾ ಯುದ್ಧದಲ್ಲಿ ನಮ್ಮ ಲಕ್ಷ್ಯ ಗುರಿಯಲ್ಲಿರುವಂತೆ ಅದನ್ನು ಸಾಧಿಸುವ ಲಕ್ಷ್ಯವೇ ನಮ್ಮ ಪ್ರಧಾನ ಶಸ್ತ್ರವಿರುವಂತೆ ಉಪಾಸನೆಯಲ್ಲಿ ಪ್ರಣವಾಕ್ಷರವನ್ನು ಒಂದು ಧನುಸ್ಸೆಂದು ಆತ್ಮಾ ಬಾಣವೆಂದು ಪರಬ್ರಹ್ಮನೇ ಲಕ್ಷ್ಯವೆಂದು ಹೇಳಿದ್ದಾನೆ. ಪ್ರಮಾದವಿಲ್ಲದೇ ಸಾಧಕನು ಜ್ಞಾನ ಪೂರ್ವಕ, ಈ ಪ್ರಣವಾಕ್ಷರ ಮೂಲಕ ಆ ಬ್ರಹ್ಮವಸ್ತುವನ್ನು ಪಡೆಯಬಹುದು ಹೇಗೆಂದರೆ.

ಪ್ರಣವೋ ಧನುಃ ಶರೋ ಹ್ಯಾತ್ಮಾ ಬ್ರಹ್ಮತಲ್ಲಕ್ಷ್ಯ ಮುಚ್ಯತೇ ।
ಅಪ್ರಮತ್ತೇನ ವೇದ್ಧವ್ಯಂ ಶರವತ್ ತನ್ಮಯೋಭವೇತ್ ॥ (ಮು.2-2-4)

ಇದರ ಸರಳ ಅರ್ಥವೇನೆಂದರೆ, ಪ್ರಣವಾಕ್ಷರವನ್ನು ಹಾಡುತ್ತ ಹಾಡುತ್ತ ಅದರಲ್ಲಿ ಲೀನವಾಗಬೇಕು. ಅದರಿಂದಲೇ ವಾಣಿರಸ, ಆತ್ಮರಸ, ಬ್ರಹ್ಮಾನಂದರಸ, ಇವೆಲ್ಲವೂ ಕೂಡಿ ಸಮರಸದ ಅನುಭವವು ಸಿಗುತ್ತದೆ. ಅಂದರೆ ಒಂದೇ ಸ್ವರ (ಪ್ರಣವಗಾನ) ದಿಂದ ಸಮಕಾಲದಲ್ಲಿ ಸಾಮರಸ್ಯಯೋಗ ಸಿದ್ಧವಾಗುತ್ತದೆ.

ಆ ಅನುಭವವಿತ್ತೆಂದು ಯಾರಾದರೂ ಕೇಳಿದರೆ ಅದನ್ನು ಏನೆಂದು ಹೇಳಲು ಸಾಧ್ಯವಿಲ್ಲ. ಅದರ ಸ್ವಾದ ಮತ್ತು ಅನುಭವವನ್ನು ನಾವೇ ಸ್ವತಃ ತಿಳಿದುಕೊಳ್ಳಬೇಕು. ಹೇಗೆ ಜೇನು ತುಪ್ಪ, ಸಕ್ಕರೆ ಬೆಲ್ಲ ಇವುಗಳ ಸ್ವಾದವನ್ನು "ಮಧುರವಾಗಿದೆ, ಸಿಹಿಯಾಗಿದೆ ಎಂದು ಕೇವಲ ಶಬ್ದದಿಂದ ಹೇಳಿದರೆ. ಅವುಗಳ ಸ್ವಾದವು ಗೊತ್ತಾಗುವುದಿಲ್ಲವೋ ಅವುಗಳ ರುಚಿಯನ್ನು ಅನುಭವಿಸಿಯೇ ತಿಳಿದುಕೊಳ್ಳಬೇಕೋ ಹಾಗೆಯೇ ಸಂಗೀತವನ್ನು ಕೇಳಿಯೇ ಅನುಭವಿಸಬೇಕು.

"ನ ಖಲು ಇಕ್ಷುಕ್ಷೀರಗುಡಾದೀನಾಂ ಮಧುರ ರಸಭೇದಾಃ ।
ಶಕ್ಯಾಃ ಸರಸ್ವತ್ಯಾಖ್ಯಾತುಮ್" ।

ಬ್ರಹ್ಮಸೂತ್ರದ ಶಾರೀರಕ ಭಾಷ್ಯದಲ್ಲಿ "ಭಾಮತೀ" ಟೀಕೆಯಲ್ಲಿ ವಾಚಸ್ಪತಿ ಮಿತ್ರರು ಹೇಳುತ್ತಾರೆ. ವ್ಯಾವಹಾರಿಕವಾಗಿ ಪ್ರತಿದಿನ ಸವಿಯುವ ಪದಾರ್ಥಗಳ ರಸದ ಬಗ್ಗೆಯೇ ಹೀಗಿರುವಾಗ ಆ ಪರಮಾನಂದ ರಸದ ವಿಷಯವನ್ನು ಬಣ್ಣಿಸುವದೆಂತು ಸಾಧ್ಯ. ಅಲ್ಲಿ ಸ್ವತಃ ವೇದ ಮಾತೆಯೇ ಮೌನವಾಗಿದ್ದಾಳೆ.

ಯತೋ ವಾಚೋ ನಿವರ್ತಂತೇ, ಅಪ್ರಾಪ್ಯ ಮನಸಾ ಸಹ ।
ಆನಂದಂ ಬ್ರಹ್ಮಣೋ ವಿದ್ವಾನ್ ನ ಬಿಭೇತಿ ಕುತಶ್ಚನ ॥
- ತೈ. ಉ.ಬ್ರ. ವಲ್ಲಿ 8/ಅನುವಾಕ್)

ಆ ರಸದ ಅನಿರ್ವಚನೀಯತಾ ಮತ್ತು ಪರಾಕಾಷ್ಠಾ ಒಪ್ಪಿದ್ದಾರೆ. ಅದು ವ್ಯಾಖ್ಯಾನದಿಂದ ಸಮಾಪ್ತವಾಗುವಂತಿಲ್ಲ. ಮತ್ಯಾವ ಶಬ್ದಗಳಿಂದ ಅದರ ವ್ಯಾಖ್ಯಾನ ಅಗುವುದಿಲ್ಲ. ಆದರೆ ಸಂಗೀತ ವಿದ್ಯಾದ ದೀರ್ಘ ಕಾಲದವರೆಗೆ ಅಭ್ಯಾಸ ಮಾಡಿ ಶ್ರದ್ಧಾಪೂರ್ವ ಆ ರಸದ ಅನುಸಂಧಾನ ಮಾಡುತ್ತಾ ಪ್ರೇಮಪೂರ್ವಕ ಹಾಡುತ್ತಾ, ಆ ಪರಮ ರಸವನ್ನು ಸವಿಯಬೇಕು. ಇರಲಿ.

ಈ ರಸವೇ ಎಲ್ಲದರ ಸಾರವು. ಅದರ ಒಂದು ಲೇಶ ಮಾತ್ರ ಇಲ್ಲಿ ಹೇಳಬೇಕೆನ್ನುವೆ. ಪೃಥ್ವಿಯ ಮೇಲೆ ನಾವೆಲ್ಲರೂ ಇದ್ದೇವೋ ಆ ನೆಲ, ಆಕಾಶ, ವಾಯು, ತೇಜ ಮತ್ತು ನೀರು ಇವೆಲ್ಲವೂ ಭೂತ ಮಾತ್ರದ ಸಾರವು. ಈ ಪೃಥ್ವಿಯ

ಸಾರ ನೀರಿದೆ. ನೀರಿನ ಸಾರವು ಔಷಧವು. ಯಾಕೆಂದರೆ ಔಷಧಗಳು ನೀರಿನಿಂದಲೇ ಪೋಷಿಸಲ್ಪಡುತ್ತವೆ. ಆ ಔಷಧ ಮತ್ತು ಅನ್ನದ ಸಾರವೇ ಪುರುಷನೆಂದಿದ್ದಾರೆ. ಯಾಕೆಂದರೆ ಅನ್ನದ ಪರಿಪಾಕದಿಂದಲೇ ಪುರುಷನು ಜನ್ಮಿಸಿದ್ದಾನೆ. ಈ ಪುರುಷನ ಸಾರವೇ ವಾಕ್-ರಸ ಯಾಕೆಂದರೆ ಎಲ್ಲಾ ಜ್ಞಾನ ಮತ್ತು ಅನುಭವ ವಾಣಿಯಿಂದಲೇ ಪ್ರಕಾಶಿತವಾಗುತ್ತದೆ. ಎಲ್ಲ ವಾಣಿಗಳ ಸಾರವೇ ಋಚಾ ಮತ್ತು ಆ ಋಚದ ಸಾರವೇ ಸಾಮವು. ಸಾಮದ ರಸವೇ ಉದ್ಗೀಥವು. ಇದು ಎಲ್ಲ ರಸಗಳ ಮೂಲವು. ಅದೇ ಪರಮ ರಸವು ಇದನ್ನು ಎಂಟನೆ ರಸ "ಉದ್ಗೀಥ" ವೆಂದು ಕರೆಯುತ್ತಾರೆ.

ಸಾಮವೇದದ ಛಾಂದೋಗ್ಯ ಉಪನಿಷತ್ತಿನಲ್ಲಿ ಈ ರಸದ ವರ್ಣನೆ ಉಪಲಬ್ಧವಾಗಿದೆ.

1) ಏಷಾಂ ಭೂತಾನಾಂ ಪೃಥಿವೀ ರಸಃ
2) ಪೃಥ್ವಿವ್ಯಾಃ ಆಪೋ ರಸಃ
3) ಅಪಾಮ್ ಓಪಧಯೋ ರಸಃ
4) ಓಷಧೀನಾಂ ಪುರುಷೋ ರಸಃ
5) ಪುರುಷಸ್ಯ ವಾಗ್ರಸಃ
6) ವಾಚಃ ಋಗ್ರಸಃ
7) ಋಚಃ ಸಾಮರಸಃ
8) ಸಾಮ್ನ ಉದ್ಗೀಥೋ ರಸಃ

ಸ ಏಷ ರಸಾನಾಂ ರಸತಮಃ ಪರಮಃ ಪರಾರ್ಥ್ಯೋಽಷ್ಟಮೋ
ಯದುದ್ಗೀಥಃ । ಇತಿ (ಛಾಂ ಉ. 1/1/2-3)

ಅದೇ ಉದ್ಗೀಥವು ಪರಾವಾಣಿ ರೂಪದಲ್ಲಿದೆ ಮತ್ತು ಜ್ಞಾನ ಚೇತನಾ ಜ್ಯೋತಿರ್ಮಯ ತತ್ತ್ವದಿಂದ ಪೂರ್ಣವಾಗಿದೆ.

ತಸ್ಯಾ ಸತ ಋಷಯಃ ಸಪ್ತ ತೀರೇ ವಾಗಷ್ಟಮೀ
ಬ್ರಹ್ಮಣಾ ಸಂವಿದಾನಾ ಇತಿವಾಗ್ ಹಿ ಅಷ್ಟಮೀ
ಬ್ರಹ್ಮಣಾ ಸಂವಿತ್ತೇ" (ಬೃಉ.)

ಏಳು ಪ್ರಾಣಗಳ ಏಳು ಮಾತ್ರೆಗಳಿವೆ. ಆ ಮಾತ್ರೆಗಳಲ್ಲದೇ ಎಂಟನೆಯದಾಗಿ ಪರಾವಾಣಿ ಇದೆ. ಅದನ್ನೇ ಅಮಾತ್ರಾ ಎನ್ನುವರು. ಈ ಬ್ರಹ್ಮಾಂಡದಲ್ಲಿ ಆ ಆದಿತ್ಯನೇ ಉದ್ಗೀಥ ದೇವತೆಯು. ಎಲ್ಲ ಪ್ರಾಣಗಳೊಳಗೆ ಮುಖ್ಯ ಪ್ರಾಣವೇ ಉದ್ಗೀಥವಾಗಿರುತ್ತದೆ. ವೇದದದಲ್ಲಿ ಇದನ್ನೇ ಇಂದ್ರ ರೂಪವೆಂದು ವರ್ಣನೆ ಮಾಡಿದ್ದಾರೆ. ಅದಕ್ಕೆ 'ಅಂಗೀರಸ್'

ಎಂದೆನ್ನುತ್ತಾರೆ. ಯಾಕೆಂದರೆ ಅದು ಎಲ್ಲ ಅಂಗದಲ್ಲಿನ ಮೂಲ ಸಾರಭೂತ ರಸವಾಗಿದೆ. ಅದಕ್ಕೇ ಬೃಹಸ್ಪತಿಯೆಂದೂ ಎಂದಿದ್ದಾರೆ. ವಾಣಿಯೇ "ಬೃಹತೀ" ಇದೆ. ಆ ವಾಣಿಯ ಅಧಿಪತಿಯೇ ಬೃಹಸ್ಪತಿಯು. ಇದನ್ನು ಛಾಂದೋಗ್ಯ ಉಪನಿಷತ್ತಿನಲ್ಲಿ ಸ್ಪಷ್ಟ ಮಾಡಿದ್ದಾರೆ.

ಅಥ ಖಲು ಯ ಉದ್ಗೀಥಃ ಸ ಪ್ರಣವಃ ಸ ಉಗ್ಗೀಥಃ ।
ಅಸೌ ವಾ ಆದಿತ್ಯ ಉದ್ಗೀಥಃ ಏಷ ಪ್ರಣವಃ
ಓಮಿತಿ ಹಿ ಏಷ ಸ್ವರನ್ನೇತಿ ॥ – ಇತಿ ಛಾಂ. ಉ. 1/5/1)

ಅಥಾಧ್ಯಾತ್ಮಂ ಯ ಏವಾಯಂ ಮುಖ್ಯಃ
ಪ್ರಾಣಃ ತಮುದ್ಗೀಥಮುಪಾಸೀತೋಮಿತಿ
ಹ್ಯೇಷ ಸ್ವರನ್ನೇತಿ । (ಛಾಂ.ಉ. 1–5–3)

ಏತ ಮು ಏವಾಂಗಿರಸಂ ಮನ್ಯಂತೇ
ಅಂಗಾನಾಂ ಯದ್ರಸಃ । (ಛಾಂ.ಉ.1–2–10)

ಏತಮು ಏವ ಬೃಹಸ್ಪತಿಂ ಮನ್ಯಂತೇ
ವಾಗ್ ಹಿ ಬೃಹತೀ ತಸ್ಯಾ ಏಷ ಪತಿಃ ॥ (ಛಾಂ. ಉ. 1–2–11)

ನಿಜವಾಗಿ "ಸಾಮ" ಶಬ್ದದ ಅರ್ಥ ಕೇವಲ ಸಾಮವೇದದ ಸ್ವರ ಮತ್ತು ವರ್ಣಗಳೊಂದಿಗೆ ಸಾಮರಸ್ಯ ಯೋಗದಿಂದ ಸಿದ್ಧವಾದ ಪೂರ್ಣ ಬಿಂದುವೇ ಸತ್ವವು. ಏಕೆಂದರೆ ಅದು ಪೂರ್ಣ ವಿರಾಮರೂಪವಾದ ಒಂದು ಅಲೌಕಿಕ ಪೂರ್ಣ ವಸ್ತುವಾಗಿದೆ. ಅದಕ್ಕೆ ಸ್ಥಾನಮಾನ ಮತ್ತು ನಾಮರೂಪಪೆಂದಿರುವುದಿಲ್ಲ. ಅದನ್ನು ಬಿಟ್ಟು ಮತ್ತಾವ ವಸ್ತುವೂ ಇರಲು ಸಾಧ್ಯವಿಲ್ಲ.

ಬೃಹಸ್ಪತೇ ನ ಪರಃ ಸಾಮ್ನೋ ವಿದುಃ – ಇತಿ ಋಕ್ 2/16/23)

ಈ ವಿಶ್ವದ ಎಲ್ಲ ವೃತ್ತಿಗಳ ಪೂರ್ಣರೂಪವು ಎಲ್ಲಿ ವಿಲಯ ಮತ್ತು ವಿರಾಮವಾಗುತ್ತದೋ ಅದೇ ಸಾಮವು ಅದರದೇ ದೇವತೆ ಇಂದ್ರನಾಗಿದ್ದಾನೆ.

"ಇದಿ ಪರಮೈಶ್ವರ್ಯೇ" ಅಂದರೆ ಯಾರಲ್ಲಿ ಪರಮೈಶ್ವರ್ಯವಿದೆಯೋ ಆತನೇ ಇಂದ್ರ ಎಂದು ಸಿದ್ಧವಾಗುತ್ತದೆ. ಆದ್ದರಿಂದ "ಪರಮರಸರೂಪ ಸಾಮದಿಂದ ಗಾಯನ ಮಾಡಿರಿ" ಎಂದು ಉಪದೇಶಿಸಿದ್ದಾರೆ.

ಇಂದ್ರಾಯ ಸಾಮಗಾಯತ, ವಿಪ್ರಾಯ ಬೃಹತೇ ಬೃಹತ್ ।
ಧರ್ಮಕೃತೇ ವಿಪಶ್ಚಿತೇ ಪನಸ್ಯವೇ ॥ – (ಋ 8/68/1)

ಅಂದರೆ ಇಂದ್ರನಿಗಾಗಿ ಸಾಮವನ್ನು ಹಾಡಿರಿ. ಅವನು ಪ್ರಕಾಶಕ ಮತ್ತು ವಿಶ್ವವ್ಯಾಪಕನಾಗಿದ್ದಾನೆ. ಆ ದೊಡ್ಡ ಇಂದ್ರನಿಗಾಗಿ ದೊಡ್ಡ "ಬೃಹತ್" ಸಾಮಗಾನ ಮಾಡಿರಿ.

ಬೃಹದಿಂದ್ರಾಯ ಗಾಯತ ಮರುತೋ ವೃತ್ರಹಂತಮಮ್
ಯೇನ ಜ್ಯೋತಿರಜನಯನ್ ಋತಾವೃದೋ ದೇವಂ ದೇವಾಯ ಜಾಗೃವಿ ॥

– ಋ8/28/1)

ಈ ಮಂತ್ರದಲ್ಲಿ ಮರುತ್ ದೇವತೆಗೆ ಉಪದೇಶಿಸಿದ್ದಾರೆ. ಇಂದ್ರನಿಗಾಗಿ ಬೃಹತ್ಸಾಮವನ್ನು ಹಾಡಿರಿ. ಆ ಇಂದ್ರನ ಅನುರೂಪ ಗುಣಾನುವಾದ ಮಾಡಲು ಯೋಗ್ಯರಾಗಿರಿ. ಇದರಿಂದ ಜ್ಞಾತಾ ಆಗುವಿರಿ. ಈ ಸಾಮಗಾನದ ಪತಿ ಅಧಿಷ್ಠಾತಾ ದೇವತೆ ಇಂದ್ರನಿದ್ದಾನೆ. ಆ ಇಂದ್ರನು ಎಲ್ಲ ದೇವತೆಗಳ, ಎಲ್ಲ ಇಂದ್ರಿಯಗಳ ಅಂದರೆ ಇಂದ್ರಿಯರೂಪಿ ಪ್ರಾಣಗಳ ರಾಜಾ, ಎಲ್ಲ ತತ್ವಗಳಲ್ಲಿ ಶ್ರೇಷ್ಠನಿದ್ದು ಎಲ್ಲರ ಅಧ್ಯಕ್ಷನಾಗಿದ್ದಾನೆ. ಚೇತನರೂಪ ಅಂತರಾತ್ಮನಿಗೆ ಚೇತರಿಸುವ ಪರಾವಾಣಿಯ ಅವಲಂಬನದಿಂದ ಪ್ರಾಣವೇ ಹಾಡುತ್ತದೆ. ಆದ್ದರಿಂದ ಪ್ರಾಣವೇ "ಗಯ" ಎಂದರೆ ಗಾಯಕ ಎಂದಿದ್ದಾರೆ. **"ಗಾಯಂತೀತಿ ಗಯಾ"** ಯಾವುದು ಈ ಪ್ರಾಣದಿಂದ ಹಾಡಲ್ಪಡುತ್ತದೋ ಆ ವಾಣಿಯೇ ಈ ಪ್ರಾಣಗಳ ರಕ್ಷಣೆ ಮಾಡುತ್ತದೆ. ಈ ತಾತ್ವಿಕ ಅರ್ಥದಿಂದಲೇ ಆ ವಾಣಿಗೆ "ಗಾಯತ್ರೀ" ಎಂದಿದ್ದಾರೆ.

ಗಾಯಂತಂ ತ್ರಾಯಸೇ ಯಸ್ಮಾದ್ ಗಾಯತ್ರೀ ತ್ವಂ ತತಃ ಸ್ಮೃತಾ (ನಾ.ಉ.)
ಪ್ರಾಣಾವೈ ಗಯಾಃ ತತ್ಪ್ರಾಣಾಗ್‌ಂಸ್ತತ್ರೇ ತದ್ ಯದ್
ಗಯಾಗ್‌ಂಸ್ತತ್ರೇ ತಸ್ಮಾದ್ ಗಾಯತ್ರೀ ॥ – ಬೃ.ಉ. 5/14/4)

"ಸೈಷಾ ಗಾಯತ್ರೀ ಅಧ್ಯಾತ್ಮಂ ಪ್ರತಿಷ್ಠಿತಾ" ಇತ್ಯಾದಿ ಯಾವ ಕಾರಣದಿಂದ ಗಾಯತ್ರಿಯು ಹಾಡುವವರ ರಕ್ಷಣೆ ಮಾಡುತ್ತದೋ ಆ ಗಾಯತ್ರಿಯ ಮುಖದಿಂದ, ಮುಖ್ಯ ಪ್ರಾಣನ ಮುಖಾಂತರ, ಆ ಪೂರ್ಣಾತ್ಮ ರೂಪ ಇಂದ್ರನನ್ನು ಹಾಡುತ್ತಾರೆ.

"ಗಾಯಂತಿ ತ್ವಾ ಗಾಯತ್ರಿಣಃ, ಗಾಯತ್ರೇಣ ಪ್ರತಿ ಮಿಮೀತೇ ಅರ್ಕಮ್

(ಋ 1/164/24)

ಈ ಪ್ರಾಣವೂ ಆ ಇಂದ್ರನ ಸತ್ವದಿಂದಲೇ ಹುಟ್ಟಿ ಬಂದಿರುವುದು.

"ಐಂದ್ರಃ ಪ್ರಾಣೋ ಅಂಗೇ ಅಂಗೇ ವಿಬೋಧ್ಯತ್" (ತೈ.ಸಂ.) ಆತ್ಮದ ಅನುಸರಣ ಮಾಡಿ ಅವಳು ಹಾಡುತ್ತಾಳೆ. ಆ ಅನುಷ್ಟಪ್ ಹೆಸರಿನ ಹಾಡುವವನು ತನ್ನ ವಾಣಿಯನ್ನನುಸರಿಸಿ ಅಲೆವ ಅಂತರಾತ್ಮ ಚೇತನರೂಪಿ ಇಂದ್ರನು ಜ್ಞಾನಿಜನರು ಅವನನ್ನು ಬುದ್ಧಿಯಿಂದ ನೋಡಿದ್ದಾರೆ. ಅವನನ್ನು ಸಾಕ್ಷಾತ್ಕರಿಸಿ ಕೊಂಡಿದ್ದಾರೆ.

ಬೀಭತ್ಸೂ ನಾಂ ಸಯುಜಂ ಹಂಸ ಮಾಹುರಪಾಂ ದಿವ್ಯಾನಾಂ ಸಖ್ಯೇ ಚರಂತಮ್।
ಅನುಷ್ಟುಭಮನು ಚ ಚೂರ್ಯಮಾಣಮಿಂದ್ರಂ ನಿಚಿಕ್ಯುಃ ಕವಯೋ ಮನೀಷಾ ॥

ಇತಿ (ಋ 10/124/6)

ಈ ಮಂತ್ರದ ವ್ಯಾಖ್ಯಾ ಐತರೇಯ ಆರಣ್ಯಕದಲ್ಲಿದೆ.

"ವಾಚಿ ವೈ ತದೈಂದ್ರಂ ಪ್ರಾಣಂ ನ್ಯಚಾರಯನ್
ಇತ್ಯೇತದುಕ್ತಂ ಭವತಿ" ಇತಿ । (ಐ.ಆ)

ಈ ಪ್ರಕಾರ ಆ ವಾಣಿಗೆ ಹಾಡುವಳೆಂದೆನ್ನುವರು. ಮತ್ತು ಹಾಡುವವರ ರಕ್ಷಕಳೆಂದೆನ್ನುವರು. "ಗಾಯತ್ರೀ" ಈ ಛಂದಸ್ಸಿನ ಹೆಸರಿನ ಅರ್ಥವೂ ಹಾಡುವವರನ್ನು ದಾಟಿಸುವವಳೆಂದಾಗಿದೆ.

ಗಾಯತ್ರೀ ವಾ ಇದಂ ಸರ್ವಂ ಭೂತಂ ಯದಿದಂ
ಕಿಂಚ– ವಾಗ್ ವೈ ಗಾಯತ್ರೀ ವಾಗ್ ವಾ ಇದಂ
ಸರ್ವಂ ಭೂತಂ ಗಾಯತಿ ಚ – ತ್ರಾಯತೇ ಚ ॥ ಇತಿ (ಛಾಂ.ಉ. 3/12/1)

ಗಾಯತ್ರಿಯ ಮೀಮಾಂಸೆಯನ್ನು ಬ್ರಹ್ಮಸೂತ್ರದಲ್ಲಿ ಮಾಡಲಾಗಿದೆ.

ಜ್ಯೋತಿಶ್ಚರಣಾಭಿಧಾನಾತ್" ।
ಛಂದೋಭಿಧಾನಾನ್ನೇತಿ ಚೇನ್ನ ತಥಾ ಚೇತೋಽರ್ಪಣ
ನಿಗದಾತ್ತಥಾ ದರ್ಶನಮ್ – (ಬ್ರ.ಸೂ. 1–1–24–25)

ಆ ಪರಬ್ರಹ್ಮ ವಸ್ತುವಿನ ಉಪಾಸನೆಯಲ್ಲಿ ಗಾಯತ್ರೀ ಛಂದದ ಸಾಮ್ಯದೃಷ್ಟಿಯಿಂದ ಯೋಗವೆಂದು ತೋರಿಸಿದ್ದಾರೆ.

"ಪಾದೋಽಸ್ಯ ಸರ್ವಾ ಭೂತಾನಿ, ತ್ರಿಪಾದಸ್ಯಾಮೃತಂ ದಿವಿ" ಈ ಮಂತ್ರದಿಂದ ತ್ರಿಪಾದ ಮತ್ತು ಚತುಷ್ಪಾದ ತತ್ವಗಳ ಯೋಗದಿಂದ ಗಾಯತ್ರೀ ರೂಪಿ ಪರಾವಾಣಿ ಮತ್ತು ಪರಬ್ರಹ್ಮ ವಸ್ತುವಿನ ಸಾಮ್ಯ ಮತ್ತು ಎಲ್ಲ ವಸ್ತುಗಳ ಸಾಮ್ಯವು ಇದೆ. ಬ್ರಹ್ಮಸೂತ್ರದ ಶಾರೀರಿಕ ಮುಂತಾದ ಭಾಷ್ಯಗಳಲ್ಲಿ ಈ ನಿರ್ಣಯಕ್ಕೆ ತಲುಪಿದ್ದಾರೆ. ಹಾಡುವ ಈ ಪ್ರಾಣವನ್ನು ಗಂಧರ್ವವೆಂದಿದ್ದಾರೆ. ಯಾಕೆಂದರೆ ಎಲ್ಲ ಪ್ರಾಣಿಗಳ ಹೃದಯದಲ್ಲಿ ಆ ವಾಣಿಯನ್ನೇ ಹಾಡುತ್ತಿರುತ್ತಾರೆ. ಆ ಈ ವಾಣಿಯನ್ನು ಚೇತನರೂಪಿ ಅಂತರಾತ್ಮ (ಮನಸ್ಸಿನಿಂದ) ಧಾರಣ ಮಾಡಿದೆ. ಆ ಜ್ಯೋತಿರ್ಮಯ ವಾಣಿಯನ್ನು ಜ್ಞಾನಿ ಜನರು ತಮ್ಮ ಹೃದಯದಲ್ಲಿ ರಕ್ಷಿಸುತ್ತಾರೆ. ಅದು ಆಕಾಶದ ತನ್ಮಾತ್ರಾ ಇದೆ. ಅದು ಒಳಗಿನಿಂದ ಬುದ್ಧಿಗೆ ಪ್ರೇರಣೆಯನ್ನು ಕೊಡುತ್ತದೆ.

ಈ ವಾಕ್ ತತ್ವವು ಋಗ್ವೇದದಲ್ಲಿ ಪ್ರಸಿದ್ಧವಿದೆ. ಪತಂಗ ಋಷಿಗಳು ಇದರದೇ ದ್ರಷ್ಟಾರರಿದ್ದಾರೆ.

ಪತಂಗೋ ವಾಚಂ ಮನಸಾ ಬಿಭರ್ತಿ ತಾಂ
ಗಂಧರ್ವೋ ಅವದದ್ ಗರ್ಭೇ ಅಂತಃ ।
ತಾಂ ದ್ಯೋತಮಾನಾಂ ಸ್ವರ್ಯಂ ಮನೀಷಾಮೃತಸ್ಯ
ಪದೇ ಕವಯೋ ನಿಪಾಂತಿ ॥ ಇತಿ (ಋ10/126/3)

ಈ ವಾಣಿಯನ್ನು ಮಧ್ಯಮಾ ಎಂದೂ ತಿಳಿದಿದ್ದಾರೆ. ಆ ಮಧ್ಯಮದ ಎರಡು ಪ್ರಕಾರಗಳಿವೆ. ಒಂದು ಹೊರಗಿನ ಬ್ರಹ್ಮಾಂಡದಲ್ಲಿ ಮಧ್ಯಮ ಲೋಕರೂಪ ಅಂತರಿಕ್ಷದಲ್ಲಿ ಇರುವುದು ಮತ್ತೊಂದು ಮಧ್ಯಮ ಲೋಕದ ಅಧಿಪತಿ ವಾಯು, ಇಂದ್ರ, ಮತ್ತು ರುದ್ರ ಇವರ ವಿದ್ಯುತ್ ಜ್ಯೋತಿರ್ಮಯ ದೇವತಾ ವಿಭೂತಿಗಳೊಡನೆ ಕೂಡಿಕೊಂಡಿರುತ್ತದೆ. ಅದೇ (ಮಧ್ಯಮ) ಭಾರತಿ ಹೆಸರಿನಿಂದ ಋಗ್ವೇದದಲ್ಲಿ ಪ್ರಸಿದ್ಧಿಗೊಂಡಿದೆ. ಅದರ ವರ್ಣನೆಯನ್ನು ಹತ್ತು ಭಿನ್ನ ಭಿನ್ನ ಸ್ಥಾನಗಳಲ್ಲಿನ ಸೂಕ್ತಗಳಲ್ಲಿ ನೋಡ ಸಿಗುತ್ತದೆ.

ತಿಸ್ರೋ ದೇವ್ಯಃ ಸರಸ್ವತೀಳಾಭಾರತ್ಯಃ। ಅದರಲ್ಲಿನ "ಇಳಾ" ಇದು ಪೃಥ್ವಿಯ ಅಧಿಪತಿ ಅಗ್ನಿಯ ಶಕ್ತಿಯೆಂದು ತಿಳಿದಿದ್ದಾರೆ. ಅದನ್ನು "ಅಗ್ನಾಯೀ" ಎಂದೆನ್ನುತ್ತಾರೆ.

"ಭಾರತಿ" ಅಂತರಿಕ್ಷಾಧಿಪತಿ ಇಂದ್ರನ ಶಕ್ತಿಯು. ಆದ್ದರಿಂದ "ಇಂದ್ರಾಣಿ" ಎನ್ನುತ್ತಾರೆ. ಅವಳೇ ರುದ್ರನ ಯೋಗದಿಂದ "ಗೌರಿ" ಎನಿಸಿಕೊಳ್ಳುತ್ತಾಳೆ. ಸರಸ್ವತಿಯು ದ್ಯುಲೋಕಾಧಿಪತಿ ಸೂರ್ಯನ ಶಕ್ತಿಯು. ಅವಳಿಗೆ "ವರುಣಾನಿ" ಎಂದೂ ಅನ್ನುತ್ತಾರೆ. ಸೂರ್ಯನಿಗೆ "ಸರಸ್ವಾನ್" ಎಂದೆನ್ನುತ್ತಾರೆ. ಈ ರೀತಿಯಿಂದ ಸರಸ್ವತಿ ಇಳಾ, ಮತ್ತು ಭಾರತಿ ಈ ಮೂವರೂ ಕ್ರಮಶಃ ದ್ಯುಲೋಕ, ಪೃಥ್ವಿ ಮತ್ತು ಅಂತರಿಕ್ಷದೊಡನೆ ಸಂಬಂಧಿಸಿದ್ದಾರೆ. ಈ ಮೂವರೂ ವಾಗ್ದೇವತೆಯ ವಿಭೂತಿಗಳಾಗಿದ್ದಾರೆ.

ಭಾರತೀಳೇ ಸರಸ್ವತಿ ಯಾವಃ ಸರ್ವಾ
ಉಪಬ್ರುವೇ । ತಾನಶ್ಚೋದಯತ ಶ್ರೀಯೇ – (ಋ1/188/8)

ಇಹೇಂದ್ರಾಣೀ ಮುಪದ್ಧಯೇ ವರುಣಾನೀಂ ಸ್ವಸ್ತಯೇ।
ಅಗ್ನಾಯೀಂ ಸೋಮಪೀತಯೇ – (ಋ 1/22/12)

ವಾಗ್ದೇವತೆಗಳ ಈ ಮೂರೂ ರೂಪಗಳು ನನ್ನ ಗ್ರಂಥದ "ವಾಗ್ಸುಧಾ" ದಲ್ಲಿ ವಿಸ್ತೃತವಾಗಿ ವರ್ಣಿಸಲಾಗಿದೆ. ಇಲ್ಲಿ ಕೇವಲ ಉದಾಹರಣೆಗಾಗಿ ಎರಡು ಶ್ಲೋಕಗಳನ್ನು ಉದ್‌ಧೃತ ಮಾಡುತ್ತೇನೆ. ಅವುಗಳಲ್ಲಿ "ಭಾರತಿ"ಯ ವರ್ಣನೆ ಇದೆ.

ಯಾ ವಿದ್ಯುನ್ – ಮರುದ್ – ಇಂದ್ರ ರುದ್ರ ಮಹಸಾಂ
ಭಾಸಾ ಸುಭಾಷಾ ಪ್ರಭಾ ತದ್ಯೋಗಾನ್ನಿರತಾಂತರಿಕ್ಷ ಸದನೇ ಸಾ ಭಾರತೀ ವೈದ್ಯುತೀ॥
ತಸ್ಮಾನ್ಮಧ್ಯಮಲೋಕ ದೈವತ ಸತೀ ಭಾತೀಹ ಭಾಷೋದ್ಯತೀ
ಸಿದ್ಧಾ ಮಾಧ್ಯಮಿಕಾ ಸತೀ ಭಗವತೀ ವಾಗ್ದೇವತಾ ಭಾರತೀ ॥ (1)

ನಾಭೇರೂರ್ಧ್ವ ಮುಖಾ ಹೃದಂತರುದಿತಾ ಪ್ರಾಣೈಃ ಸ್ವರೈಃ ಸಸ್ವರಾಂ
ಸೂಕ್ಷ್ಮಾಂ ಮಧ್ಯದಶಾಂ ನಿಜಾಮುಪಗತಾ ಸಾ ಮಧ್ಯಮಾ ಸಂಜ್ಞಿತಾ ।
ವಾಗ್ವೈಸಾ ಹೃದಿ ಮಧ್ಯಮೇನ ಮರುತಾ ಪ್ರಾಣೇಂದ್ರ ರುದ್ರಾತ್ಮನಾ
ವಕ್ತುಂ ಸಂಯತಯೇ ಸ್ವಯಂ ಸ್ವರಸತೋ ಜ್ಞಾನಾರ್ಥದಾ ಭಾರತೀ (2)

ಅಂದರೆ ಎಲ್ಲ ಪ್ರಾಣಗಳ ಒಳಗಿನ ಹೃದಯದಲ್ಲಿ ಪ್ರಾಣದ ಸ್ವರದೊಡನೆ ಸ್ಫುರಣವಾಗುವ ವಾಣಿಯನ್ನು ಮಧ್ಯಮಾ ಎಂದಿದ್ದಾರೆ. ಪರಾ ಪಶ್ಯಂತಿ ಮಧ್ಯಮ ಮತ್ತು ವೈಖರಿ ಈ ನಾಲ್ಕರಲ್ಲಿ ಇದು ಮೂರನೆಯದು ಮತ್ತು ಮೊದಲಿನ ಪರಾವಾಣಿ ಬಿಟ್ಟರೆ ಪಶ್ಯಂತಿ ಮಧ್ಯಮಾ ವೈಖರಿ ಈ ಮೂರರಲ್ಲಿ "ಮಧ್ಯಮಾ' ಪ್ರಾಣದೊಡನೆ ಒಂದುಗೂಡಿ ಸ್ವರಯುಕ್ತಳಾಗುತ್ತಾಳೆ. ಇದೇ ವಾಣಿಯಲ್ಲಿ ಮಂಗಲಮಯ ಲಕ್ಷ್ಮೀ ದೇವತೆ ಇದ್ದಾಳೆ.

"ಭದ್ರೈಷಾಂ ಲಕ್ಷ್ಮೀರ್ನಿಹಿತಾಽಧಿ ವಾಚಿ" ಹಿಟ್ಟನ್ನು ಜಾಳಿಸಿ ಶುದ್ಧ ಮಾಡುವಂತೆ ಮನದಿಂದ ವಾಣಿಯ ಸಂಶೋಧನ ಮಾಡುತ್ತ ವಿದ್ವಾನ್ ಜನರು ಯಾವ ವಾಣಿಯಿಂದ ಉಚ್ಚಾರ ಮಾಡುತ್ತಾರೋ ಅದನ್ನು ಆ ಭಾಷೆ ಬಲ್ಲವರು ಅದರ ಅರ್ಥ ತಿಳಿದುಕೊಳ್ಳುತ್ತಾರೆ. ಹೀಗೆ ಆ ವಾಣಿಯಲ್ಲಿ ಅರ್ಥ ಜ್ಞಾನದ ಪ್ರಕಾಶನ ಮಾಡಿದ ಶಕ್ತಿರೂಪ ಸಾತ್ವಿಕ ಕಲೆಯೇ ಭಗವತಿ ಲಕ್ಷ್ಮೀ ದೇವತೆಯಾಗಿದ್ದಾಳೆ

ಸಕ್ತುಮಿವ ತಿ – ತ – ಉ ನಾ ಪುನಂತೋ
ಯತ್ರ ಧೀರಾ ಮನಸಾ ವಾಚಮಕ್ರತ ।
ಅತ್ರಾಸಖಾಯಃ ಸಖ್ಯಾನಿ ಜಾನತೇ ಭದ್ರೈಷಾಂ
ಲಕ್ಷ್ಮೀನಿರ್ಹಿತಾಽಧಿ ವಾಚಿ ॥ – (ಋ 10/71/2)

ಸಂಗೀತದಲ್ಲಿನ ನವರಸದ ಸತ್ವ

ಸಂಗೀತದಲ್ಲಿ ಎಲ್ಲ ರಸಗಳ ಸತ್ವ ತುಂಬಿಕೊಂಡಿದೆ. ಆದರೂ ಶಾಬ್ದಿಕ ಮತ್ತು ವ್ಯಾವಹಾರಿಕ ದೃಷ್ಟಿಯಿಂದ ಅವುಗಳನ್ನು ಒಂಭತ್ತು ಸಂಖ್ಯೆಗಳಲ್ಲಿ ಪರಿಗಣಿಸಿದ್ದಾರೆ. ಹೀಗೆ.

ಶೃಂಗಾರವೀರ ಕರುಣಾದ್ಭುತ ಹಾಸ್ಯ ಭಯಾನಕಾಃ ।
ಶಾಂತೋರೌದ್ರಶ್ಚ ಭೀಭತ್ಸೋ ವಾಚೋ ನವ ರಸಾಃ ಸ್ಮೃತಾಃ ॥

ಈ ಎಲ್ಲ ರಸಗಳು ವಾಣಿ, ಸ್ವರ, ನಾದ ಮತ್ತು ಶಬ್ದ ಸಾಹಿತ್ಯದಲ್ಲಿ ವಿದ್ಯಮಾನವಾಗಿವೆ. ಒಂದು ವಾಣಿಯ ಮುಖಾಂತರ ಆ ಎಲ್ಲ ರಸಗಳ ಆವಿಷ್ಕಾರವಾಗಲು ಶಕ್ಯವಿದೆ. ಈ ರಸಗಳಲ್ಲದೇ ಜ್ಞಾನರಸ, ಯೋಗಾನಂದ ರಸ, ಆತ್ಮಶಾಂತಿ ರಸ ಬ್ರಹ್ಮಾನಂದ ರಸ, ಇತ್ಯಾದಿಗಳೆಂದೂ, ವೇದ ಉಪನಿಷತ್‌ಗಳಲ್ಲಿ ಹೇಳಿದ್ದಾರೆ. ಪರಮ ರಸದ ಲೇಶಮಾತ್ರದಿಂದ ಈಗಲೂ ಎಲ್ಲ ಸಂಸಾರದ ಪ್ರಾಣ ಮಾತ್ರರು ಜೀವಿಸಿದ್ದಾರೆ. ಆ ಪೂರ್ಣಾನಂದ ಪರಮ ರಸದ ಸ್ವಲ್ಪ ಹನಿ ಪ್ರಾಣಿಗಳಲ್ಲಿರದಿದ್ದರೆ ಈ ಪ್ರಾಣಿಗಳು ಜೀವಿಸಲು ಸಾಧ್ಯವಿರಲಿಲ್ಲ. ಇದೇ ಉಪದೇಶವೂ ಯಾಜ್ಞವಲ್ಕ್ಯರಿಂದ ಜನಕನಿಗೆ ಒದಗಿತ್ತು.

ಏಷ ಏವ ಪರಮ ಆನಂದಃ ಅನ್ಯಾನಿ ಭೂತಾನಿ
ಮಾತ್ರಾಮುಪಜೀವಂತಿ । ಇತಿ – (ಬೃ.ಉ. 4–3–32)

ಅಖಂಡ ನಾದ ಬ್ರಹ್ಮರೂಪ ಆ ದಿವ್ಯ ವಾಣಿಯಿಂದಲೇ ಸಮುದ್ರರೂಪದಿಂದ ತುಂಬಿದ ರಸವು ಝರಿಯಾಗಿ ಹರಿಯುತ್ತಿದೆ. ಅದೇ ರಸದಿಂದ ಈ ಪ್ರಾಣಿಗಳು ಜೀವಿಸಿದ್ದಾರೆ. ಅದರಿಂದಲೇ ಅಕ್ಷರಗಳ ಅವಿರ್ಭಾವವಾಗಿದೆ. ಮತ್ತು ಈ ವಾಕ್‌ಶಕ್ತಿಯಿಂದಲೇ ಆ ನಿರ್ಗುಣ ಬ್ರಹ್ಮ ವಸ್ತುವು ಸಗುಣವಾಗಿದೆ. ಮತ್ತು ಅಕ್ಷರ ಸತ್ಯ ಬ್ರಹ್ಮ ಎಂಬ ಹೆಸರಿನಿಂದ ಹೇಳಲ್ಪಟ್ಟಿದೆ. ಹೆಚ್ಚೇನು? ಆ ವಾಗ್ರಸದಿಂದಲೇ ಈ ಎಲ್ಲ ವಿಶ್ವವು ಜೀವಿಸಿದೆ. ಇದೇ ಪ್ರತ್ಯಕ್ಷ ಬ್ರಹ್ಮರೂಪವಾಣಿಯ ರಸವು.

ಗೌರೀರ್ಮಿಮಾಯ ಸಲಿಲಾನಿ ತಕ್ಷತೀ
ತಸ್ಯಾಃ ಸಮುದ್ರಾ ಅಧಿವಿಕ್ಷರಂತಿ ।
ತೇನ ಜೀವಂತಿ ಪ್ರದಿಶ್ಚತಸ್ರಃ
ತತಃ ಕ್ಷರತ್ಯಕ್ಷರಂ ತದ್ ವಿಶ್ವಮುಪಜೀವತಿ ॥ – (ಋ1/164/42)

ಈ ರೀತಿಯಿಂದ ಆ ಬ್ರಹ್ಮ ವಸ್ತುವನ್ನು ಒಂದು ರಸವೆಂದು ತಿಳಿದಿದ್ದಾರೆ. ಆ ಬ್ರಹ್ಮ ವಸ್ತುವಿನ ಜ್ಞಾನವೂ ರಸರೂಪವಾಗಿದೆ.

ರಸೋ ವೈ ಸಃ ರಸಂ ಹ್ಯೇವಾಯಂ ಲಬ್ಧ್ವಾऽನಂದೀ
ಭವತಿ । ಕೋ ಹ್ಯೇವಾನ್ಯಾತ್‌ಕಃ ಪ್ರಾಣ್ಯಾತ್ ।
ಯದೇಷ ಆಕಾಶ ಆನಂದೋ ನ ಸ್ಯಾತ್। ಏಷ ಹ್ಯೇವಾನಂದಯಾತಿ । ಇತಿ(ತೈ.ಉ.ಬ್ರ.ವಲ್ಲಿ2–3)

ಸಂಗೀತವನ್ನು ಯೋಗ ಮತ್ತು ತಪಸ್ಸು ಎಂದು ತಿಳಿದು ಉಪಾಸಿದರೆ ಅದರಿಂದ ಬ್ರಹ್ಮಾನಂದ ರಸವು ಪ್ರಾಪ್ತವಾಗುತ್ತದೆ. ಅಲೌಕಿಕ ಮತ್ತು ನಿವ್ಯಜಿ (ಎಂದೂ ಕಡಿಮೆಯಾಗದ) ಶ್ರದ್ಧೆಯಿಂದ ನಿರಂತರ ಅವಿಚ್ಛಿನ್ನ ರೂಪದಿಂದ ಆ ಪರಮ ವಸ್ತುವಿನ ಅನುಸಂಧಾನದಿಂದ ದೀರ್ಘಕಾಲ ಮಾಡಿದ ತಪಸ್ಯೆಯಿಂದ ಸಂಗೀತದ ಅಭ್ಯಾಸ ಮಾಡಲಾಗಿ ಆ ಪರಮ ರಸದ ಅನುಭವ ಅವಶ್ಯ ಸಿಗುತ್ತದೆ. ಇದಕ್ಕೆ ದೃಷ್ಟಿಭೇದ ಮತ್ತು ಉದ್ದೇಶ್ಯವು ಕಾರಣವಿರುತ್ತದೆ. ಯಾವ ಯಾವ ಕೆಲಸವನ್ನು ಯಾವ ಯಾವ ಉದ್ದೇಶ್ಯ ಇಟ್ಟುಕೊಂಡು ಮಾಡುತ್ತಾರೋ ಅದಕ್ಕನುಸರಿಸಿ ಫಲ ದೊರಕುತ್ತದೆ. ಭಕ್ತಿ ಮಾರ್ಗದ ಆರಾಧನೆಯಲ್ಲಿಯೂ ಹೀಗೆ ಆಗುತ್ತದೆ. ಅಂದರೆ ಉದ್ದೇಶ್ಯಕ್ಕನುರೂಪ ಫಲಪ್ರಾಪ್ತಿಯಾಗುತ್ತದೆ. ಉದಾಹರಣೆಗಾಗಿ, ಪ್ರಲ್ಹಾದನು ಪೂರ್ಣಭಕ್ತಿ ಭಾವದಿಂದ ನಾರಾಯಣನ ನಾಮವನ್ನು ಹಿಡಿದಿದ್ದಾನೆ. ನಾಟಕದಲ್ಲಿ ಪ್ರಲ್ಹಾದನ ಪಾತ್ರ ವಹಿಸಿರುವ ಕಲಾಕಾರನು ಪ್ರಲ್ಹಾದನಂತೆ ನಾರಾಯಣನ ನಾಮವನ್ನು ಜಪಿಸುತ್ತಾನೆ. ಆದರೆ ಅವನ ಉದ್ದೇಶ ಭಗವದ್ಭಕ್ತಿ ಇರದೇ ಮತ್ತಿನ್ನಾವುದೋ ಇರುತ್ತದೆ. ಅಲ್ಲಿ ಕುಳಿತ ಪ್ರೇಕ್ಷಕರನ್ನು ಖುಶಿ ಮಾಡಲೆಂದು ಅಥವಾ ಪ್ರಮಾಣ ಪತ್ರ

ಇಲ್ಲವೇ ಪಾರಿತೋಷಕ "ವಾಹ್ ವಾಹ್" ಎನಿಸಿಕೊಳ್ಳುವುದಕ್ಕಾಗೆಂದು ಅವನು ಪ್ರಲ್ಹಾದನನುಕರಣೆ ಮಾಡುತ್ತಾನೆ. ಆ ನಟನ ಭಗವನ್ನಾಮದ ಹಾಡು ನಕಲಿ (ನಾಟಕ)ಯಾಗಿರುತ್ತದೆ. ಅದು ಸಕಲಿ (ಸತ್ಯ)ವಾಗಿರುವುದಿಲ್ಲ. ಆದ್ದರಿಂದ ಅವನಿಗೆ ಫಲವೂ ಕೂಡಾ ಅಷ್ಟೇ ಸಿಗುತ್ತದೆ. ಅವನು ಪ್ರಲ್ಹಾದನಂತೆ ಪೂರ್ಣಭಕ್ತಿ ಭಾವದಿಂದ ಕರುಣಾರಸವನ್ನು ಹೊಂದಿ ನಿಜವಾಗಿ ಭಗವಂತನ ನಾಮವನ್ನು ಹಾಡಿದ್ದರೆ ಇವತ್ತೂ ಭಗವಂತನು ಪ್ರಲ್ಹಾದನಿಗಾದಂತೆ ಇವನಿಗೂ ಪ್ರಸನ್ನನಾಗುತ್ತಾನೆ. ಎಲ್ಲ ಪ್ರೇಕ್ಷಕರು ಅಂತರ್ಯಾಮಿ ಪರಮಾತ್ಮನಲ್ಲಿ ತಲ್ಲೀನರಾದರೆ ಸಾಮರಸ್ಯದ ಆನಂದವು ಸಿಗಲು ಸಾಧ್ಯವಾಗುತ್ತದೆ.

"ರಾಮ ರಾಮ ಸಬ ಕೋ ಊ ಕಹೆತಗಠಾಕೂರ್ ಅರು ಚೋರ್ ।
ಜಿಸ ನಾಮಸೆ ಧ್ರುವ ಪ್ರಲ್ಹಾದ ತರೇ ವಹ ನಾಮಹೈ ಕುಛ ಔರ್ ॥

ಇದು ಪ್ರಸಿದ್ಧವಿದೆ. ನಿಜವಾಗಿಯೂ ಆ ಪ್ರಲ್ಹಾದನ ಕರುಣಾಜನಕ ಕರೆಯು ರೋದನವಲ್ಲ. ಅದು ಹಾಡು ಅದೇ ಭಾವದಿಂದ ರೋದನವೂ ಗಾಯನವಾಗುತ್ತದೆ. ಆ ಭಾವವಿರದಿರಲಾಗಿ ಗಾಯನವೇ ರೋದನವಾಗುತ್ತದೆ. ಇದೆಲ್ಲ ಮಾತು ಹೊಸದೇನಲ್ಲ. ಇದನ್ನೆಲ್ಲರೂ ತಿಳಿದಿದ್ದಾರೆ. ಆದರೂ ನಾನು ಸ್ಮರಣೆಗಾಗಿ ಕೊಟ್ಟಿದ್ದೇನೆ.

ನಾದಬ್ರಹ್ಮರೂಪ ಸರಸ್ವತೀ

ಅನ್ಯಾನ್ಯ ದೇವತೆಗಳ ಕೈಯಲ್ಲಿ ಧನುಷ್ಯ ಬಾಣ, ತಲವಾರ ತ್ರಿಶೂಲ, ಮುಂತಾದ ಶಸ್ತ್ರಾಸ್ತ್ರ ಕೊಡಲಾಗಿದೆ. ಅವೆಲ್ಲ ಆ ಶಕ್ತಿಗಳ ತಾತ್ವಿಕ ಸ್ವರೂಪದ ಬೋಧಕ ಸಂಕೇತಗಳು.

ಸರಸ್ವತಿಯ ನಾಲ್ಕೂ ಕೈಗಳಲ್ಲಿ ಶಸ್ತ್ರಾಸ್ತ್ರ ಕೊಟ್ಟಿದ್ದಾರೆ. ಅವು ಪರಾಶಕ್ತಿ ರೂಪ ವಾಣಿಯದೇ ಪ್ರತೀಕ ಮತ್ತು ರೂಪಗಳಾಗಿದ್ದಾವೆ. ನಿರ್ಗುಣ ಮತ್ತು ನಾಮರೂಪಾತೀತ ಪೂರ್ಣ ಬ್ರಹ್ಮವಸ್ತು ಎಷ್ಟು ವ್ಯಾಪಕವಾಗಿದೆಯೋ ಅಷ್ಟೇ ವ್ಯಾಪಕ ಅದರ ವಾಚಕ ಶಕ್ತಿರೂಪವಿದೆ.

ಯಾವದ್ ಬ್ರಹ್ಮ ವಿಷ್ಠಿತಂ ತಾವತೀ ವಾಕ್ – (ಋ10/114/8)

ಇದರ ವ್ಯಾಖ್ಯೆಯಿಂದ ಇದೇ ಅರ್ಥವು ಸ್ಪಷ್ಟವಾಗುತ್ತದೆ.

ಯತ್ರ ಕ್ವ ಚ ಬ್ರಹ್ಮ ತದ್ವೈ ವಾಕ್
ಯದ್ವೈವಾಕ್ ತದ್ವೈ ಬ್ರಹ್ಮೇತ್ಯೇತದುಕ್ತಂ ಭವತಿ" – (ಐ.ಆ.1/2/8)

ಆ ಪರಬ್ರಹ್ಮ ವಸ್ತುವಿಗೆ ಯಾವ ಹೆಸರಿದೆಯೋ ಅದೇ ವಾಣಿಯದೂ ಆಗಿದೆ.

ಸತ್ಯ, ಅಕ್ಷರ, ಬ್ರಹ್ಮ ಪ್ರಸಿದ್ಧ ವಿವೆ. ಆ ಪೂರ್ಣಬ್ರಹ್ಮ ವಸ್ತುವನ್ನು ಬಿಂದು ರೂಪದಲ್ಲಿ ಹೇಳುತ್ತಾರೆ. ಅದೇ ವಾಣಿಯ ಅನುಸ್ವಾರವು. ವಸ್ತುತಃ ಬ್ರಹ್ಮ, ಹೆಸರು

ವಾಣಿಯಲ್ಲಿ ಮುಖ್ಯವಾಗಿದೆ. ನಾಮರೂಪಾತೀತ ನಿರ್ಗುಣ ವಸ್ತುವಿಗಾಗಿ ಇದು ಗೌಣವಾಗಿದೆ. ಅಂದರೆ ಗುಣಭೂತವಾಗಿದೆ.

ವಾಗ್ ವೈ ಬ್ರಹ್ಮ, ತಸ್ಯಾ ಏಷ ಪತಿಃ ಬ್ರಹ್ಮಣಸ್ಪತಿಃ । – (ಬೃ.ಉ. 1/3/21)

ಪ್ರತ್ಯಕ್ಷ ಬ್ರಹ್ಮನೇ ವಾಣಿಯು ಅದರ ವಾಚ್ಯಾರ್ಥ ರೂಪವೇ ವಸ್ತು. ಅದು ಪರೋಕ್ಷ ಬ್ರಹ್ಮವಿದೆ. ಇದರಂತೆಯೇ "ಓಂ" ಕೂಡಾ ವಾಣಿಯ ಪ್ರಧಾನ ರೂಪವಿದೆ.

ಋಚೋ ಅಕ್ಷರೇ ಪರಮೇ ವ್ಯೋಮನ್ (ಋ 1/164/1)

ಈ ಮಂತ್ರದಲ್ಲಿ ಯಾವುದು ಅಕ್ಷರ ಶಬ್ದವಿದೆಯೋ ಅದು ವಾಣಿಯದೇ ಇದ್ದು ಮತ್ತು ವಾಣಿ ವಾಚ್ಯಾರ್ಥದ ಅಕ್ಷರ ವಾಚಕವಾಗಿದೆ. ಈ ಎರಡರ ಸಮನ್ವಯದಿಂದಲೇ ಪೂರ್ಣ ಜ್ಞಾನವಾಗಲು ಸಾಧ್ಯವಿದೆ. ಆದ್ದರಿಂದ ಯಾಸ್ಕಮುನಿಯು ಇದೇ ಮಂತ್ರದ ಮೇಲೆ ವ್ಯಾಖ್ಯಾನಿಸುವಾಗ

"ಓಮಿತ್ಯೇಷಾ ವಾಗಿತಿ ಶಾಕಪೂಣಿಃ" ಎಂದು ಸ್ಪಷ್ಟವಾಗಿ ಎಂದಿದ್ದಾನೆ.

"ಓಂ" ಇದು ಆ ಪರಾವಾಣಿಯ ನಾದಬ್ರಹ್ಮದ ಅನುಕರಣೆ ಇದೆ.

ಓಮಿತ್ಯೇತದನುಕೃತಿಃ (ತೈ.ಉ.ಶಿ.8)

ಆಕಾಶದಲ್ಲಿ ತನ್ಮಾತ್ರಾರೂಪದಿಂದ ತುಂಬಿರುವ ಯಾವ ಶಬ್ದ ಅಥವಾ ನಾದವಿಹುದೋ ಅದರದೇ ಅನುಕರಣೆಯೇ ಈ ಅಖಂಡ ನಾದರೂಪಿ ಓಂಕಾರವಾಗಿದೆ. ಆ ನಾದದ ಗುಪ್ತರೂಪಿ ಸ್ವರೂಪವೇ 'ಈಂ' ಅದೇ ಪರಾಶಕ್ತಿಯ ಹೆಸರು ಕೂಡಾ ಪರಬ್ರಹ್ಮ ವಸ್ತುವಿನದೂ ಕೂಡಾ ಅದೇ ಹೆಸರು.

'ಯ ಈಂ ಚಿಕೇತ ಗುಹಾ ಭವಂತಮ್ (ಋ.1)
'ಯ ಈಂ ಚಕಾರ ನ ಸೋ ಅಸ್ಯವೇದ' (ಋ 1/164)

ತ್ರಿಸೋ ಮಾತೃಸ್ತ್ರೀನ್ ಪಿತ್ರೂನ್ ಬಿಭ್ರದೇಕ
ಉರ್ಧ್ವಸ್ತಸ್ಥೌ ನ ಈಂ ಅವಗ್ಲಾಪಯಂತಿ" (ಋ 1/164)

ಹೀಗೆ ನೂರಾರು ಮಂತ್ರಗಳಲ್ಲಿ 'ಈಂ' ಕಾರದ ನಿರ್ದೇಶವಿದೆ. ಈ 'ಈಂ'ಕಾರವನ್ನು ನಾದ-ಬ್ರಹ್ಮ ರೂಪವೆಂದಿದ್ದಾರೆ. ಅದು ಗುಪ್ತಪ್ರಣವವಾದ್ದರಿಂದ ಈವರೆಗೂ ಗುಪ್ತವಾಗಿ ಉಳಿದಿದೆ.

'ಈಂ ಕಾರಾಯ ಸ್ವಾಹಾ ಈಂ ಕೃತಾಯ ಸ್ವಾಹಾ" (ತೈ ಸಂ. 1/1/16(6)

(ಕೃ.ಯ.ಸಂ. ವೈಶ್ವದೇವಕಾಂಡದದಲ್ಲಿನ ಅಶ್ವಮೇಧದಲ್ಲಿ)

ಹೀಗೆ ಯುಜುರ್ಮಂತ್ರವು ಸ್ಪಷ್ಟವಾಗಿ "ಈಂ" ಕಾರವನ್ನು ಹೇಳಿದೆ ಇದೊಂದು ಸ್ವತಂತ್ರ ವಿಷಯವಾದ್ದರಿಂದ ಇಲ್ಲಿ ಅದರ ವಿಸ್ತಾರವು ಪ್ರಾಸಂಗಿಕವಾಗಿಲ್ಲ. ಇದು ನಾದಬ್ರಹ್ಮನ ಗುಪ್ತ ತತ್ವವು.

ಬ್ರಹ್ಮವಸ್ತುವನ್ನು ತಿಳಿಯಲು ಮತ್ತು ತಿಳಿಸಲು ವಾಣಿಯು ಏಕ ಮಾತ್ರ ಪ್ರಮಾಣವಾಗಿದೆ. ವೇದ ವಾಣಿಯ ಒಂದು ಪ್ರತ್ಯಕ್ಷ ಪ್ರಮಾಣವಿದೆ. ಆ ಬ್ರಹ್ಮ ವಸ್ತುವನ್ನು ತಿಳಿಯಬಹುದಾಗಿದ್ದರಿಂದ "ಮಾ, ಮಾತಾ, ಮಾಯಾ" ಮುಂತಾದ ಹೆಸರಿನಿಂದ ಕರೆಯಲ್ಪಡುವ ವಾಗ್ದೇವಿಯು ಆ ಪರಮ ವಸ್ತುವನ್ನು ತೋರಿಸಿ, ಬ್ರಹ್ಮ ಹೆಸರಿನಿಂದ ಕರೆದು ಅದನ್ನು ತಿಳಿಸಿ ಕಲಿಸಿತು. ಆಗ್ಗೆ ಇದು ಬ್ರಹ್ಮವೆಂದು ತಿಳಿಯಿತು. ಅದರಂತೆ – ವಾಣಿಯು ವೇದದ ಮುಖದಿಂದ ಆ ವಸ್ತುವಿನ ವರ್ಣನೆ ಮಾಡಿದೆ. ಆದರೆ ಅದರ ನಿಜ ವರ್ಣನೆ ಸಾಧ್ಯವಾಗದಿದ್ದ ಕಾರಣ ನಿವೃತ್ತವಾಯಿತು. ಅಂದರೆ ಆ ಬ್ರಹ್ಮವಸ್ತುವು ನಿರ್ವಚನವಾದ್ದರಿಂದ ವಾಣಿಯೂ ಮೌನಧಾರಣ ಮಾಡಬೇಕಾಯಿತು.

"ಯತೋ ವಾಚೋ ನಿವರ್ತಂತೇ ಅಪ್ರಾಪ್ಯ ಮನಸಾಸಹ ।
ಆನಂದಂ ಬ್ರಹ್ಮಣೋ ವಿದ್ವಾನ್ ನ ಬಿಭೇತಿ ಕುತಶ್ಚನ ॥

ಇತಿ – (ತೈ. ಉ.ಬ್ರ.ವಲ್ಲೀ ಅನು 9-1)

ಆ ಬ್ರಹ್ಮಾನಂದವು ಅನಿರ್ವಚನೀಯವಾಗಿದೆ ಎಂದು ಸಿದ್ಧವಾಗುತ್ತದೆ.

ಶ್ರೀ ಶಂಕರಾಚಾರ್ಯರು ಆ ಮೌನವನ್ನು ವರ್ಣಿಸಿದ್ದಾರೆ "ಮೌನ ವ್ಯಾಖ್ಯಾ ಪ್ರಕಟಿತ ಪರಬ್ರಹ್ಮ ತತ್ವಂ ಯುವಾನಮ್" ಇತಿ–

ಮೌನವನ್ನು ಧಾರಣೆಮಾಡಿ ಏನನ್ನೂ ಮಾತಾಡದಿದ್ದರೂ ಬ್ರಹ್ಮವಸ್ತುವಿನ ಅಸ್ತಿತ್ವವನ್ನು ಹಿಡಿದಿಹಳು. ಆ ವೀಣೆಯಲ್ಲಿರುವ ತಂತಿಗಳು ಜ್ಞಾನದ ರೂಪವುಳ್ಳವು ಅಥವಾ ಚೇತನ ರೂಪವುಳ್ಳವು. ವಾಗ್ದೇವತೆಯು ಸ್ವತಃ ಏನನ್ನೂ ಎನ್ನದೆ ಆ ಚೇತನ ತಂತಿಗಳನ್ನು ಪ್ರಾಣ ಶಕ್ತಿಯ ಯೋಗದಿಂದ ಮಿಡಿದಳು. ಸರಸ್ವತಿಯು ಆ ತಂತಿಗಳನ್ನು ಮಿಡಿಯಲು ಅದರಿಂದ ಒಂದು ನಾದವು ಹೊರಹೊಮ್ಮಿತು. ಅದನ್ನು 'ಅಂ' ಅನುಸ್ವಾರವೆಂದೆನ್ನುತ್ತಾರೆ. ಇದೇ ಧ್ವನಿಯು ಪೂರ್ಣ ಬಿಂದು ತತ್ವದ ಪ್ರತೀಕ ರೂಪವಾಗಿದೆ. ಆ ನಾದದಿಂದ ಯಾವದೋ ಒಂದು ಚೇತನ ವಸ್ತುವಿನಿಂದ ಈ ನಾದವು ಹೊರಟಿಹುದೆಂದು ಗೊತ್ತಾಯಿತು. ವಾಗ್ದೇವತೆಯ ನಾಲ್ಕು ಕೈಗಳಲ್ಲಿನ ಪ್ರತೀಕದ ಗೂಢಾರ್ಥ ಈ ಪ್ರಕಾರವಾಗಿದೆ.

(1) ತಂತಿಗಳ ನಾದದಿಂದ ಬ್ರಹ್ಮವಸ್ತುವನ್ನು ಬೋಧಿಸುವಳೆಂದು ವಾಣಿಯ ಹೆಸರು "ದೈವೀ ವೀಣಾ" ಎಂದು ಹೇಳಿದೆ. ಆ ವೀಣೆಯಿಂದಲೇ ವಾಣಿಗೆ "ವೀಣಾಪಾಣಿ" ಎಂಬ ಪದವಿ ದೊರಕಿದೆ. ಈ ಪದವಿಯ ಮುಖ್ಯ ಅರ್ಥವು ಏನೆಂದರೆ. "ಮಾತಾಡದೇ

ತಿಳಿಸುವವಳು" ಎಂದಾಗುತ್ತದೆ. ಇದೇ ನಾದ ಬ್ರಹ್ಮದ ತತ್ವವಿದೆ. ಅದರಲ್ಲಿ ಒಂದು ಅಲೌಕಿಕ ರಸವಿದೆ. ಅದನ್ನು ಕೇಳಲು, ಶ್ರವಣಮಾತ್ರದಿಂದ ಆ ರಸದ ಅನುಭವವಾಗುತ್ತದೆ.

(2) ಸರಸ್ವತಿಯ ಕೈಯಲ್ಲಿರುವ ಮಾಲೆಯು ಅಕ್ಷರದ್ದಿದೆ. "ಅಕಾರ" ದಿಂದ "ಹಕಾರ" ದ ವರೆಗೆ ಇರುವ ವರ್ಣಗಳು ರುದ್ರಭಗವಾನನ ಡಮರುವಿನಿಂದ ಹೊರಬಿದ್ದಿವೆ.

"ನೃತ್ತಾವಸಾನೆ ನಟರಾಜರಾಜೋ ననాద ಡಕ್ಕಾಂ ನವ ಪಂಚವಾರಮ್". ರುದ್ರನ ತಾಂಡವ ನೃತ್ಯದ ನಂತರ ಡಮರುವಿನಿಂದ ಹೊರಟ "ಆ ಇ ಉ ಣ್-ಹ ಲ್" ಮುಂತಾದವುಗಳ ಹದಿನಾಲ್ಕು ಸೂತ್ರಗಳು ಪ್ರಸಿದ್ಧವಿವೆ. "ಅಕಾರ" ದಿಂದ ಪ್ರಾರಂಭವಾಗಿ "ಕ್ಷ-ಕಾರ" ದ ವರೆಗಿನ ಅಕ್ಷರ ಮಾಲೆಯಿಂದಲೇ ಜಪ ಮಾಡುವ ವಿಧಾನವಿದೆ

(3) ಸರಸ್ವತಿಯ ಕೈಯಲ್ಲಿನ ಪುಸ್ತಕವು ಶಬ್ದ ಶಕ್ತಿಯ ಸ್ವರೂಪದ್ದಾಗಿದೆ. ಈ ಅಕ್ಷರಗಳ ಯೋಗದಿಂದ ಹೊರಟ ಶಬ್ದಗಳಿಂದ ಅರ್ಥ ಜ್ಞಾನವಾಗುತ್ತದೆ. ಪುಸ್ತಕದ ರೂಪದಲ್ಲಿ ಶಬ್ದ ವಾಕ್ಯ ಮುಂತಾದ ಗದ್ಯರೂಪ ಪದ-ಪಾದ-ಪದ್ಯ ಮುಂತಾದ ಛಂದೋಮಯ ರೂಪಗಳು ಇರುತ್ತವೆ. ಈ ಎಲ್ಲವೂ ವಾಣಿಯ ಸ್ವರೂಪವಾಗಿವೆ. ಈ ತತ್ವದ ಉಲ್ಲೇಖ ಕವೀಂದ್ರ ಕಾಲಿದಾಸನು ಮಾಡಿದ್ದಾನೆ.

ವಾಗರ್ಥಾವಿವ ಸಂಪೃಕ್ತೌ ವಾಗರ್ಥ ಪ್ರತಿ-ಪತ್ತಯೇ ।
ಜಗತಾಂ ಪಿತರೌ ವಂದೇ ಪಾರ್ವತೀ ಪರಮೇಶ್ವರೌ ॥

(4) ಸರಸ್ವತಿಯ ನಾಲ್ಕನೇ ಕೈಯು "ಅಭಯ". ಮುದ್ರೆಯಲ್ಲಿದೆ. ಇದರ ತಾತ್ಪರ್ಯವೇನೆಂದರೆ ಮೇಲೆ ಹೇಳಿದ ಮೂರೂ ಸಾಧನೆಗಳ "ಶಕ್ತಿರೂಪ" ಶಸ್ತ್ರಗಳಿಂದ ಸರಸ್ವತಿಯು ಜ್ಞಾನರಸ ಸುರಿಸುತ್ತಿದ್ದಾಳೆ ಎಂದು. ಈ ರೀತಿಯಲ್ಲಿ ಸರಸ್ವತಿಯ ಕೈಯಲ್ಲಿನ ವೀಣಾ, ಮಾಲಾ, ಪುಸ್ತಕ ಮತ್ತು ಅಭಯಮುದ್ರಾ ಇವುಗಳ ಪ್ರತೀಕಾರ್ಥ ಸ್ಪಷ್ಟ ಮಾಡಿದಂತಾಯ್ತು.

ಸಂಗೀತದಿಂದ ಎಲ್ಲ ಪುರುಷಾರ್ಥಗಳ ಪ್ರಾಪ್ತಿ

ಸಂಗೀತವೇ ಸಂಸಾರ, ಪ್ರಪಂಚ, ಮತ್ತು ಪರಮಾರ್ಥ ಮುಂತಾದ ಎಲ್ಲ ಪದಾರ್ಥಗಳ ಮುಖ್ಯ ಸಾಧನವಾಗಿದೆ. ಈ ಸತ್ಯವನ್ನೇ ಈ ಕೆಳಗೆ ವಿವರಿಸಿದ್ದೇವೆ. ಈ ಸಂಸಾರದಲ್ಲಿ ಸುಖ-ಶಾಂತಿಯಿಂದ ಜೀವನ ಸಾಗಿಸಲು ಪ್ರತ್ಯೇಕ ವ್ಯಕ್ತಿಗೆ ತನ್ನದೇ ಆದ ಅನೇಕ ಕಾಮನೆಗಳಿರುತ್ತವೆ. ಆ ಕಾಮನೆಗಳ ಪೂರ್ತಿಗಾಗಿ ಒಬ್ಬನೇ ಸಮರ್ಥನಿರುವುದಿಲ್ಲ. ಆದ್ದರಿಂದ ಸ್ತ್ರೀಪುರುಷ ಇಬ್ಬರ ನಿರ್ಮಾಣವಾಯಿತು. ಅವರು ಈ ವಿಶ್ವಚಕ್ರದ ಸಂಚಾಲಕರೆಂದೆನಿಸಿ ಕೊಳ್ಳುತ್ತಾರೆ. ಅವರು ಯೋಗದಿಂದ ದಂಪತಿಯಾಗುತ್ತಾರೆ.

ಅವರ ಮುಖ್ಯ ಉದ್ದೇಶ್ಯವೆಂದರೆ.

"ನಮ್ಮಿಬ್ಬರ ಯೋಗದಿಂದ ಪರಸ್ಪರ ಆನಂದ ರಸವೂ ಸಿಕ್ಕು ಸತ್ಸಂತಾನದಿಂದ ಆ ಚಂದ್ರಾರ್ಕ ಬೆಳೆದು ನಾವು ಅಮೃತತ್ವವನ್ನು ಪ್ರಾಪ್ತ ಮಾಡಿಕೊಳ್ಳುವುದು"

"ಪ್ರಜಾಭಿರಗ್ನೇ ಅಮೃತತ್ವಮಸ್ಯಾಮ್" (ಋ 5/4/10)

